ಬೆಂಗಳೂರು,
ಕೋಲಾರ,
ಹಾಸನ,
ಚಿತ್ರದುರ್ಗ,
ದಾವಣಗೆರೆ,
ವಿಜಯನಗರ,
ಬಳ್ಳಾರಿ,
ರಾಯಚೂರು,
ವಿಜಯಪುರ,
ಕಲಬುರ್ಗಿ

www.sahayavani.com

ದಶಕದ ನಡಿಗೆ... RNI No: KARKAN/2014/54928 ನೊಂದವರ ಧ್ವನಿ

# ಸಹಾಯವಾಣಿ

Postal Registration N.o KA/BGW--1862/2024-26

SAHAYAVANI KANNADA DAILY PAPER ಕನ್ನಡ ದಿನಪತ್ರಿಕೆ

ಸಂಪುಟ: 11 Vol:11 ಸಂಚಿಕೆ: 144 Issuse:143 ದಿನಾಂಕ: 11–07–2024 Date:11-07-2024 ಮಂಗಳವಾರ Thuesday ಪುಟ:4 Page:4 ರೂ.: 3–00 Rs.3-00

ಸಂಪಾದಕರು: ಎಸ್.ಕೆ.ಒಡೆಯರ್ ಉಪಸಂಪಾದಕರು: ಸುಚಿತ್ರ ಎಸ್. ಒಡೆಯರ್ ಎಂಬಿಎ ಗೌರವ ಸಂಪಾದಕರು: ಗುರುರಾಜು ಎಂ., ಫೋ: 080–31212322 ಮೊ.: 9902543494 E-mail:sahayavani@gmail.com



ಜಾಹೀರಾತಿಗಾಗಿ ಸಂಪರ್ಕಿಸಿ
9902543494
6362304104

# ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ

## ಅತ್ಯಾಚಾರ ಮುಕ್ತ ಸಮಾಜವಾಗಲಿ





**ಕೊಡಗು:** ಕೊಡಗು ಜಿಲ್ಲೆಯ ಶನಿವಾರಸಂತೆ ಹೋಬಳಿಯ ಬಸವನಕೊಪ್ಪ ಗ್ರಾಮದ ಪಕ್ಕದಲ್ಲಿ ಇರುವ ಗಡಿ ಭಾಗಕ್ಕೆ ಸೇರಿದ ಹಾಸನ ಜಿಲ್ಲೆಗೆ ಸೇರಿದ ಸಕಲೇಶಪುರ ತಾಲೂಕಿನ ಹಣಸೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಬರೆಯುವ ಪುಸ್ತಕಗಳನ್ನು ಮತ್ತು ಪರಿಕರಗಳನ್ನು ದಾನಿಗಳಾದ ಪ್ರೆಸಿಲ್ಲ ಕುಮಾರಿ ಅವರಿಂದ ವಿತರಿಸಲಾಯಿತು. ಪ್ರೆಸಿಲ್ಲ ಕುಮಾರಿ ಮಾತನಾಡಿ ನಾನು ಇದೇ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಯಾಗಿದ್ದು ಈ ಶಾಲೆಯಲ್ಲಿ ಓದಿ ಇಂದು ನಾನು ಕಿನ್ಯಾ ಹೊರ ದೇಶದಲ್ಲಿ ಶಿಕ್ಷಕಿಂ–ಯಾಗಿ ಕಾರ್ಯ ನಿರ್ವಹಿಸಿ ಈಗ ಮೈಸೂರಿನಲ್ಲಿ ಶಿಕ್ಷಕಿಂ–ಯಾಗಿ ಆಗಿ ಕೆಲಸ ಮಾಡುತ್ತಿದ್ದೇನೆ ಹಾಗಾಗಿ ನಾನು ಓದಿದ ಶಾಲೆಗೆ ನನ್ನ ಕೈಲಾದ ಸಹಾಯ ಮಾಡಬೇಕೆಂದು ಈ ಶಾಲೆಯ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಪರಿಕಾರಗಳನ್ನು ವಿತರಿಸುತ್ತೇನೆ ಹಾಗೂ ಸಿಹಿಯನ್ನು ವಿತರಿಸುತ್ತಿದ್ದೇನೆ ಎಂದು ತಿಳಿಸಿದರು ಹಾಗೂ ವಿದ್ಯಾರ್ಥಿಗಳು ಚೆನ್ನಾಗಿ ಕಲಿತು ಮುಂದೆ ಬರಬೇಕು ಶಾಲೆಗೆ ಒಳ್ಳೆಯ ಹೆಸರು ತಂದುಕೊಡಬೇಕು ಹಾಗೂ ತಂದೆ ತಾಯಿಗಳಿಗೆ ಒಳ್ಳೆಯ ಹೆಸರು ತಂದುಕೊಡಬೇಕಾಗಿ ತಿಳಿಸಿದರು ಹಾಗೂ ಇದೇ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರ ಅಂಬಾಮಣಿ ಮಾತನಾಡಿ ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ನೀವು ಪುಸ್ತಕಗಳನ್ನು ಕೊಡುತ್ತಿರುವುದು ಸಂತೋಷಕರ ವಿಚಾರ ಪುಸ್ತಕಗಳು ಮತ್ತು ಪರಿಹಾರಗಳನ್ನು ಕೊಟ್ಟ ಸಿಸ್ಟರ್ ಪ್ರೆಸಿಲ್ಲ ಕುಮಾರಿ ರವರಿಗೆ ಹೃದಯಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ ಎಂದು ತಿಳಿಸಿದರು. ಹಾಗೂ ಶಾಲೆಯ ವತಿಯಿಂದ ಮುಖ್ಯ ಶಿಕ್ಷಕರಾದ ಅಂಬಾಮಣಿ ಹಾಗೂ ಸಾಹ ಶಿಕ್ಷಕರ ದಿವ್ಯ ದಿನೇಶ್ ಇವರುಗಳೊಂದಿಗೆ ಎಸ್. ಎಮ್.ಸಿ. ಅಧ್ಯಕ್ಷರಾದ ಪೂರ್ಣಿಮರವರು ಸಿಸ್ಟರ್ ಪ್ರೆಸಿಲ್ಲ ಕುಮಾರಿ ರವರನ್ನು ಸನ್ಮಾನಿಸಲಾಯಿತು ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ನೆನಪಿನ ಕಾಣಿಕೆಯನ್ನು ಕೊಡಲಾಯಿತು.

## ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆಯಿಂದ ದಾನಿಗಳಾದ ಸಿಸ್ಟರ್ ಪ್ರೆಸಿಲ್ಲ ಕುಮಾರಿ ಇವರ ಸಹಕಾರದೊಂದಿಗೆ ಹಣಸೆ ಹಿರಿಯ ಪ್ರಾಥಮಿಕ ಶಾಲೆಯ 16 ವಿದ್ಯಾರ್ಥಿಗಳಿಗೆ ಬರೆಯುವ ಪುಸ್ತಕ ಮತ್ತು ಪರಿಕರಗಳನ್ನು ವಿತರಣೆ ಮಾಡಲಾಯಿತು.



ಕೊಡಗು ಜಿಲ್ಲೆಯ ಶನಿವಾರಸಂತೆ ಹೋಬಳಿಯ ಬಸವನಕೊಪ್ಪ ಗ್ರಾಮದ ಪಕ್ಕದಲ್ಲಿ ಇರುವ ಗಡಿ ಭಾಗಕ್ಕೆ ಸೇರಿದ ಹಾಸನ ಜಿಲ್ಲೆಗೆ ಸೇರಿದ ಸಕಲೇಶಪುರ ತಾಲೂಕಿನ ಹಣಸೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಬರೆಯುವ ಪುಸ್ತಕಗಳನ್ನು ಮತ್ತು ಪರಿಕರಗಳನ್ನು ದಾನಿಗಳಾದ ಪ್ರೆಸಿಲ್ಲ ಕುಮಾರಿ ಅವರಿಂದ ವಿತರಿಸಲಾಯಿತು. ಪ್ರೆಸಿಲ್ಲ ಕುಮಾರಿ ಮಾತನಾಡಿ ನಾನು ಇದೇ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಯಾಗಿದ್ದು ಈ ಶಾಲೆಯಲ್ಲಿ ಓದಿ ಇಂದು ನಾನು ಕಿನ್ಯಾ ಹೊರ ದೇಶದಲ್ಲಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿ ಈಗ ಮೈಸೂರಿನಲ್ಲಿ ಶಿಕ್ಷಕಿಯಾಗಿ ಆಗಿ ಕೆಲಸ ಮಾಡುತ್ತಿದ್ದೇನೆ ಹಾಗಾಗಿ ನಾನು ಓದಿದ ಶಾಲೆಗೆ ನನ್ನ ಕೈಲಾದ ಸಹಾಯ ಮಾಡಬೇಕೆಂದು ಈ ಶಾಲೆಯ ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಪರಿಕಾರಗಳನ್ನು ವಿತರಿಸುತ್ತೇನೆ ಹಾಗೂ ಸಿಹಿಯನ್ನು ವಿತರಿಸುತ್ತಿದ್ದೇನೆ ಎಂದು ತಿಳಿಸಿದರು ಹಾಗೂ ವಿದ್ಯಾರ್ಥಿಗಳು ಚೆನ್ನಾಗಿ ಕಲಿತು ಮುಂದೆ ಬರಬೇಕು ಶಾಲೆಗೆ ಒಳ್ಳೆಯ ಹೆಸರು ತಂದುಕೊಡಬೇಕು ಹಾಗೂ ತಂದೆ ತಾಯಿಗಳಿಗೆ ಒಳ್ಳೆಯ ಹೆಸರು ತಂದುಕೊಡಬೇಕಾಗಿ ತಿಳಿಸಿದರು ಹಾಗೂ ಇದೇ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರ ಅಂಬಾಮಣಿ ಮಾತನಾಡಿ ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ನೀವು ಪುಸ್ತಕಗಳನ್ನು ಕೊಡುತ್ತಿರುವುದು ಸಂತೋಷಕರ ವಿಚಾರ ಪುಸ್ತಕಗಳು ಮತ್ತು ಪರಿಹಾರಗಳನ್ನು ಕೊಟ್ಟ ಸಿಸ್ಟರ್ ಪ್ರೆಸಿಲ್ಲ ಕುಮಾರಿ ರವರಿಗೆ ಹೃದಯಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇವೆ ಎಂದು ತಿಳಿಸಿದರು. ಹಾಗೂ ಶಾಲೆಯ ವತಿಯಿಂದ ಮುಖ್ಯ ಶಿಕ್ಷಕರಾದ ಅಂಬಾಮಣಿ ಹಾಗೂ ಸಾಹ ಶಿಕ್ಷಕರ ದಿವ್ಯ ದಿನೇಶ್ ಇವರುಗಳೊಂದಿಗೆ ಎಸ್. ಎಮ್.ಸಿ. ಅಧ್ಯಕ್ಷರಾದ ಪೂರ್ಣಿಮರವರು ಸಿಸ್ಟರ್ ಪ್ರೆಸಿಲ್ಲ ಕುಮಾರಿ ರವರನ್ನು ಸನ್ಮಾನಿಸಲಾಯಿತು ಹಾಗೂ ಕರ್ನಾಟಕ ರಕ್ಷಣಾ ವೇದಿಕೆ ನೆನಪಿನ ಕಾಣಿಕೆಯನ್ನು ಕೊಡಲಾಯಿತು.

## "ಮಾತೃ ಹೃದಯದ ಮಹಾಸಂತ"




12ನೇ ಶತಮಾನದಲ್ಲಿ ದುಃಖದಲ್ಲಿ ಬಿದ್ದು ಒದ್ದಾಡುವವರನ್ನು ಸಂತೈಸಿದ ಅಣ್ಣ ಬಸವಣ್ಣ. ಸರ್ವರಲ್ಲೂ ಪ್ರೀತಿಯನೇ ಬಿತ್ತಿ ಶಿವ ಭಕ್ತಿಯನ್ನು ಬೆಳೆದ. ಶೋಷಿತರಿಗೆ ತಂದೆಯಾಗಿ, ತಾಯಿಯಾಗಿ, ಬಂದುವಾಗಿ, ಬಳಗವಾಗಿ ನಿಂತು ಕೈಹಿಡಿದು ಮೇಲೆತ್ತಿದ. ಹಾಗೆ ಈ ಯುಗದಲ್ಲಿ ಆ ಬಸವಣ್ಣನ ಸಾಕ್ಷಾತ್ ಸ್ವರೂಪಿಗಳೇ ಆಗಿ ರೈತರ ಪಾಲಿಗೆ ದಿವ್ಯಜ್ಯೋತಿಯಾಗಿ ಬೆಳಗುತ್ತಿರುವ ಮಾತೃ ಹೃದಯದ ಮಹಾಸಂತ ಪರಮಪೂಜ್ಯ ಶ್ರೀ ಮ.ನಿ.ಪ್ರ ಗುರುಪಾದ ಮಹಾಸ್ವಾಮಿಜಿ ಶ್ರೀ ಅಡವಿಸಿದ್ದೇಶ್ವರ ಮಠ ಮರೆಗುದ್ದಿ. ಪೂಜ್ಯರು ಸದಾಕಾಲ ಸಮಾಜದ ಏಳಿಗೆಗಾಗಿ ಭಕ್ತರುದ್ದಾರಕ್ಕಾಗಿ ಹಗಲಿರುಳು ಶ್ರಮಿಸುತ್ತಿರುವ ಸರಳತೆಯ ಸಂತರು. ಯುವ ಸಮುದಾಯಕ್ಕೆ ಸ್ಪೂರ್ತಿಯ ಚಿಲುಮೆಯಾಗಿ, ಸರ್ವ ಸಮಾಜಕ್ಕೂ ಮಾರ್ಗದರ್ಶನ ನೀಡುತ್ತಿರುವ ಯೋಗಿಗಳು . ನೊಂದು ಬಂದವರಿಗೆ ತಮ್ಮ ಪ್ರೀತಿಯ ನುಡಿಗಳಿಂದ ಸಂತೈಸಿ ಧೈರ್ಯ ತುಂಬಿ ಕೈಹಿಡಿದು ಮುನ್ನಡೆಸುವ ಕರುಣಾಮೂರ್ತಿಗಳು. ಎಲ್ಲ ಸಂಪ್ರದಾಯದ ಸನ್ಯಾಸಿಗಳ ಜೊತೆಯಲ್ಲೂ ಅವಿನಾಭಾವವಾದ ಸಂಬಂಧವನ್ನು ಹೊಂದಿ, ಯಾರನ್ನು ದ್ವೇಷಿಸದೆ ಎಲ್ಲರ ಆಲೋಚನೆ ಹಾಗೂ ಚಿಂತನೆಗಳನ್ನು ಗೌರವಿಸಿ ಸರ್ವ ಸನ್ಯಾಸಿಗಳಿಗೂ ಪ್ರಿಯವಾದವರು.

–2 ನೇ ಪುಟಕ್ಕೆ

## 2ನೇ ಎಸ್.ಎಸ್.ಎಲ್ ಸಿ. ಪರೀಕ್ಷೆಯ ಫಲಿತಾಂಶ ಪ್ರಕಟ

**ಎಸ್ಎಸ್ಎಲ್ಸಿ – ಪರೀಕ್ಷೆ 2ರ ಫಲಿತಾಂಶ ಪ್ರಕಟವಾಗಿದೆ. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಯ ಫಲಿತಾಂಶವನ್ನು ಪ್ರಕಟಿಸಿದೆ**

ವಿದ್ಯಾರ್ಥಿಗಳು ಎನ್ ಐಸಿಯ ಜಾಲತಾಣ httpsps://karre-sults.nic.in. ನಲ್ಲಿ ಫಲಿತಾಂಶ ವೀಕ್ಷಿಸಬಹುದಾಗಿದೆ. ಅಧಿಕೃತ ವೆಬ್ ಸೈಟ್ ಗೆ ಭೇಟಿ ನೀಡಿದ ನಂತರ ಮತ್ತು ಫಲಿತಾಂಶದ ಲಿಂಕ್ ಅನ್ನು ತೆರೆದ ನಂತರ, ವಿದ್ಯಾರ್ಥಿಗಳು ತಮ್ಮ. ಜನ್ಮ ದಿನಾಂಕ (DOM) ಮತ್ತು ನೋಂದಣಿ ಸಂಖ್ಯೆ ಯನ್ನು ನಮೂದಿಸಬೇಕು.

2024 ರ ಎಸ್.ಎಸ್.ಎಲ್.ಸಿ ಪರೀಕ್ಷೆ –2 ಜೂನ್ 14 ರಿಂದ 22ರವರೆಗೆ ನಡೆದಿತ್ತುಬರಾಜ್ಯದ 35 ಶೈಕ್ಷಣಿಕ ಜಿಲ್ಲೆಗಳಲ್ಲಿ 724 ಪರೀಕ್ಷಾ ಕೇಂದ್ರಗಳಲ್ಲಿ 2,23,308 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಇದರಲ್ಲಿ 1,44,160 ಬಾಲಕರು ಹಾಗೂ 7,9,148 ಬಾಲಕಿಯರು ಇದ್ದಾರೆ. ಫಲಿತಾಂಶ ಹೆಚ್ಚಳಕ್ಕಾಗಿ 13085 ವಿದ್ಯಾರ್ಥಿಗಳಿಂದ SSLC–2 ಪರೀಕ್ಷೆ ಬರೆದಿದ್ದರು.

## ಶಾಸಕರಿಂದ ಕಾಮಗಾರಿಗಳಿಗೆ ಚಾಲನೆ




**ಹೂವಿನಹಡಗಲಿ :–**

15ನೇ ಹಣಕಾಸು ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆ ಅಡಿಯಲ್ಲಿ ಪಟ್ಟಣದ ನಾನಾ ಕಾಮಗಾರಿಗಳಿಗೆ ಶಾಸಕ ಕೃಷ್ಣನಾಯ್ಕ ಸೋಮವಾರ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಶಾಸಕ ಕೃಷ್ಣನಾಯ್ಕ, ಹಳೆ ತಹಸಿಲ್ ಕಚೇರಿಯನ್ನು ಕಂದಾಯ ಇಲಾಖೆಯಿಂದ ಪುರಸಭೆಗೆ ಹಸ್ತಾಂತರಿಸಲಾಗಿದೆ. ಆದರೆ ಕಟ್ಟಡ ಸಂಪೂರ್ಣ ಶಿಥಿಲಾವಸ್ಥೆಯಲ್ಲಿದ್ದು, ನವೀಕರಣಕ್ಕಾಗಿ ಮೊದಲ ಹಂತದಲ್ಲಿ 47ಲಕ್ಷ ರೂ.ಗಳ ಕ್ರಿಯಾಯೋಜನೆ ರೂಪಿಸಿ ಬಿಡುಗಡೆಗೊಳಿಸಲಾಗಿದೆ. ಸಂಪೂರ್ಣ ದುರಸ್ಥಿಗೆ ಹೆಚ್ಚುವರಿಯಾಗಿ ಇನ್ನೂ 1ಕೋಟಿ ರೂ. ಅಗತ್ಯವಿದೆ. ಕೆಲ ದಿನಗಳಲ್ಲಿ ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಿ, ಒಟ್ಟು 1.50 ಕೋಟಿ ರೂ.ನಲ್ಲಿ ಪೂರ್ಣ ಪ್ರಮಾಣದಲ್ಲಿ ನವೀಕರಿಸಿದ ಬಳಿಕ ಪುರಸಭೆಕಚೇರಿಯನ್ನು ಸ್ಥಳಾಂತರಿಸಲಾಗುವುದು ಎಂದರು. ಮದಲಗಟ್ಟಿ ವೃತ್ತದಲ್ಲಿ 15ನೇ ಹಣಕಾಸು ಯೋಜನೆಯಡಿ 25ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆಗೆ ಶಾಸಕ ಭೂಮಿ ಪೂಜೆ ನೆರವೇರಿಸಿದರು. ಸಿಸಿ ರಸ್ತೆ ಕಳೆದ ಒಂದು ವರ್ಷದ ಹಿಂದೆಯೇ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಗುತ್ತಿಗೆದಾರರು ವಿಳಂಬ ಮಾಡಿದ್ದರು. ಈಗಾಗಲೇ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಿದ್ದು, ಸಾರ್ವಜನಿಕರ ಅನುಕೂಲಕ್ಕಾಗಿ ಸ್ಥಳೀಯ ಗುತ್ತಿಗೆದಾರರೊಂದಿಗೆ ಕಾಮಗಾರಿಯನ್ನು ನಡೆಸಲಾಗುವುದು. ಪುರಸಭೆಯಲ್ಲಿ ಅಧ್ಯಕ್ಷ–ಉಪಾಧ್ಯಕ್ಷರಿಲ್ಲದ ಕಾರಣ ತಾವು ಹಾಗೂ ಸಹಾಯಕ ಆಯುಕ್ತರು ಆಡಳಿತ ಉಸ್ತುವಾರಿಯಲ್ಲಿದ್ದು,ಸಭೆ ನಡೆಸಿ ತಮ್ಮ ವಿವೇಚನೆಗೊಳಪಟ್ಟಂತೆ ಕ್ರಿಯಾಯೋಜನೆ ರೂಪಿಸಿ ಅನುಮೋದನೆ ನೀಡಲಾಗಿದೆ ಎಂದರು. ಇದೇವೇಳೆ ಪಟ್ಟಣದ ಹೊಸ ಬಸ್ ನಿಲ್ದಾಣ, ಹಳೆ ಬಸ್ ನಿಲ್ದಾಣ ಸೇರಿ ಒಟ್ಟು 6ಕಡೆಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಚಾಲನೆ ನೀಡಿದರು.

–3ನೇ ಪುಟಕ್ಕೆ



## ಕೈದಿ ನಂಬರ್ D 6106 ಕಟಿಂಗ್ ವಿಡಿಯೋ ಭಾರೀ ವೈರಲ್–

**ಬೆಂಗಳೂರು,**

ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಎ2 ಆರೋಪಿ ನಟ ದರ್ಶನ್ ಪರಪ್ಪನ ಅಗ್ರಹಾರ ಜೈಲು ಶೇರಿದ್ದು, ಇನ್ನು ದರ್ಶನ್‌ಗೆ ನೀಡಿರುವ ವಿಚಾರಣಾಧೀನ ಕೈದಿ ನಂಬರ್ ಅನ್ನು ಹಾಕಿಸಿಕೊಂಡು ಕೆಲವರು ಅಂಧಾಭಿಮಾನ ಮೆರೆಯುತ್ತಿದ್ದಾರೆ.

ಮತ್ತೊಂದೆಡೆ ಅಂತಹವರಿಗೆ ಪೊಲೀಸರು ಬಿಸಿ ಮುಟ್ಟಿಸುವ ಕೆಲಸವನ್ನು ಮಾಡುತ್ತಲೇ ಇದ್ದಾರೆ. ಈ ನಡುವೆಯೇ ಕಟಿಂಗ್ ಶಾಪ್‌ವೊಂದಲ್ಲಿ (AIR Salon) ಯುವಕನೊಬ್ಬ ತಲೆಯಲ್ಲಿ ಈ ನಂಬರ್ ಬರೆಸಿಕೊಂಡಿದ್ದು, ಈ ವಿಡಿಯೋ ಭಾರೀ ವೈರಲ್ ಆಗುತ್ತಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದ ತನಿಖೆಯನ್ನು ಪೊಲೀಸರು ಚುರುಕುಗೊಳಿಸಿದ್ದು, ಈ ಮೂಲಕ ಮಹತ್ವದ ಸಾಕ್ಷ್ಯಗಳನ್ನು ಸಂಗ್ರಹಿಸಲು ಮುಂದಾಗಿದ್ದಾರೆ. ಮತ್ತೊಂದೆಡೆ ಪತ್ನಿ ವಿಯಲಕ್ಷ್ಮಿ & ಕುಟುಂಬಸ್ಥರು ಜೈಲು ಸೇರಿರುವ ದರ್ಶನ್‌ನನ್ನು ಹೊರತರಲು ಇನ್ನಿಲ್ಲದ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ಇದರ ನಡುವೆಯೇ ಕೆಲವರು ದರ್ಶನ್‌ಗೆ ನೀಡಿರುವ ವಿಚಾರಣಾಧೀನ ಕೈದಿ ನಂಬರ್ 6106 ಅಚ್ಚೆ ಹಾಕಿಸಿಕೊಳ್ಳುವುದು, ಮಕ್ಕಳ ಬಟ್ಟೆಗಳ ಮೇಲೆ ಬರೆಸುವುದು, ವಾಹನಗಳ ಮೇಲೆ ಹಾಕಿಸುವ ಮೂಲಕ ಅಂಧಾಭಿಮಾನವನ್ನು ಮೆರೆಯುತ್ತಿದ್ದಾರೆ. ಅಷ್ಟೇ ಅಲ್ಲದೆ ಕಟಿಂಗ್ ಶಾಪ್‌ಗಳಲ್ಲೂ ಸಹ ದರ್ಶನ್‌ಗೆ ನೀಡಿರುವ ವಿಚಾರಣಾಧೀನ ಕೈದಿ ನಂಬರ್ 6106 ಶೈಲಿಯಲ್ಲಿ ಕಟಿಂಗ್ ಮಾಡಿಸಿಕೊಳ್ಳುತ್ತಿದ್ದಾರೆ. ಹಾಗೆಯೇ ಇದೀಗ ಕಟಿಂಗ್ ಶಾಪ್‌ವೊಂದರಲ್ಲಿ ಯುವಕನೊಬ್ಬ ಆ 6106 ಎಂದು ಕೆತ್ತಿಸಿಕೊಂಡಿರುವ ವಿಡಿಯೋ ಇದೀಗ ಸಾಮಾಜಿಕ ಜಾಲತಾಂದಲ್ಲಿ ಭಾರೀ ವೈರಲ್ ಆಗುತ್ತಿದೆ. ಇನ್ನು ನೆಟ್ಟಿಗರು ಇದಕ್ಕೆ "ಅಭಿಮಾನ ಇರಬೇಕು.. ಅಂಧಾಮಾನ ಇರಬಾರ್ದು, ಹೀಗೆ ಕೈದಿ ನಂಬರ್ ಬರೆಸಿಕೊಂಡು ಇವರೆಲ್ಲ ತಮ್ಮ ಕುಟುಂಬಕ್ಕೆ, ಸಮಾಜಕ್ಕೆ ಏನು ಸಂದೇಶ ಕೊಡುತ್ತಿದ್ದಾರೆ?," ಎಂದು ಪ್ರಶ್ನಿಸುತ್ತಿದ್ದಾರೆ.

–1ನೇ ಪುಟದಿಂದ

## "ಮಾತೃ ಹೃದಯದ ಮಹಾಸಂತ"

ಅದರಲ್ಲೂ "ದೇಶದ ಬೆನ್ನೆಲುಬು"ಅದು ಸನ್ಯಾಸಿಯೇ ಆಗಿರಲಿ,ಗೃಹಸ್ಥನೆ ಆಗಿರಲಿ, ಉದ್ಯೋಗಿ ಇರಲಿ,ನಿರುದ್ಯೋಗಿ ಇರಲಿ, ಶ್ರೀಮಂತನಿರಲಿ, ಬಡವನಿರಲಿ ಎಲ್ಲರಿಗೂ ಅನ್ನ ಹಾಕಿ ಹೊಟ್ಟೆ ತುಂಬುವ ಆ ಅನ್ನದಾತನ ಮೇಲೆ ಪೂಜ್ಯರಿಗೆ ಅಗಾಧವಾದ ಪ್ರೀತಿ ಅಷ್ಟೇ ಏಕೆ ಶ್ರೀಮಠದ ಭೂಮಿಯಲ್ಲಿ ತಾವೇ ರೈತರಾಗಿ ಉತ್ತಿ ಬಿತ್ತಿ ಬೆಳೆಯುತ್ತಾ ನಾಡಿನ ರೈತರ ಧ್ವನಿಯಾಗಿ ಅನೇಕ ಕೃಷಿ ಪ್ರಶಸ್ತಿಗಳಿಗೆ ಭಜನರಾದವರು. ನಿರಂತರವಾಗಿ ಕಾಯಕಯೋಗಿಗಳಂತಿರುವ ಪೂಜ್ಯರು ಒಂದು ಕಡೆ ಕೃಷಿಯ ಕಾರ್ಯ, ಮತ್ತೊಂದೆಡೆ ಕವಿಯ ಕಾರ್ಯ, ಇನ್ನೊಂದೆಡೆ ಭಕ್ತರುದ್ದಾರಕ ಗುರುಕಾರ್ಯ ಇಂತಹ ಪೂಜ್ಯರು ಸಿಗುವುದು ಬಹಳ ವಿರಳಾತಿ ವಿರಳ. ಶ್ರೀಗಳು ಬರೆಯುವ ಕವನಗಳನ್ನು ಓದಿದರೆ ಇವರು ಮಹಾಕವಿಯೇ ಎನಿಸುತ್ತಾರೆ ಅಷ್ಟು ತೂಕ ಬದ್ಧವಾದ ಕವನದ ಸಾಲುಗಳು ಇನ್ನೂ ಕೃಷಿಯ ಬಗ್ಗೆ ಮಾತನಾಡತೊಡಗಿದರೆ ಇವರು ಮಹಾ ಕೃಷಿ ವಿದ್ವಾಂಸರೆ ಎಂದೆನಿಸುವರು. ಅನೇಕ ವಿಧ ವಿಧದ ಕೃಷಿ ಪ್ರಯೋಗಗಳನ್ನು ಸ್ವತ ತಾವೇ ಮಾಡುತ್ತಾ ಅದರ ಆಗುಹೋಗುಗಳನ್ನು ಬಲ್ಲವರು. ಇನ್ನೂ ಭಕ್ತರ ಜೊತೆಗೆ ಇರುವಾಗಲಂತೂ ಅವರ ನೋವು ನಲಿವುಗಳಿಗೆ ಮನೆಯ ಸದಸ್ಯರಂತೆ ಶಕ್ತಿಯಾಗಿ ನಿಂತವರು. ಪೂಜ್ಯರ ವ್ಯಕ್ತಿತ್ವ ಅಳತೆಗೆ ಸಿಗಲಾರದು ಪದಗಳಿಗೆ ನಿಲುಕಲಾರದು. ಸದಾಕಾಲ ಪೂಜ್ಯರ ಪ್ರೀತಿಯ ಅಮೃತಧಾರಿ ನಮ್ಮೆಲ್ಲರ ಮೇಲೂ ಇರಲಿ.

## ಚಿಕ್ಕಮಗಳೂರು ಕಳಸದ ಹೆಬ್ಬಾಳೆ ಸೇತುವೆ ಮುಳುಗಡೆ



ಚಿಕ್ಕಮಗಳೂರಿನಲ್ಲಿ ನೈಋತ್ಯ ಮುಂಗಾರು ಮಳೆ ಅಬ್ಬರಿಸುತ್ತಿದೆ. ಭದ್ರಾ ನದಿ ತುಂಬಿ ಹರಿಯುತ್ತಿದ್ದು, ಹೆಬ್ಬಾಳೆ ಸೇತುವೆ ಮುಳುಗಡೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಪಶ್ಚಿಮ ಘಟ್ಟದ ಸಾಲಿನಲ್ಲಿ ಭಾರೀ ಮಳೆಯಾಗುತ್ತಿದೆ. ಭದ್ರಾ ನದಿಯ ಒಳಹರಿವು ಹೆಚ್ಚಾಗಿದ್ದು, ಹೆಬ್ಬಾಳೆ ಸೇತುವೆ ಮುಳುಗಡೆಗೆ ಕ್ಷಣಗಣನೆ ಆರಂಭವಾಗಿದೆ. ವಾಹನ ಸಂಚಾರ ಬಂದ್ ಮಾಡಲಾಗಿದೆ.ಭದ್ರಾ ನದಿಗೆ ಅಡ್ಡವಾಗಿ ಕಳಸ ತಾಲೂಕಿನ ಹೊರನಾಡು ಬಳಿಯ ಹೆಬ್ಬಾಳೆಯಲ್ಲಿ ಸೇತುವೆ ನಿರ್ಮಾಣ ಮಾಡಲಾಗಿದೆ. ಸೇತುವೆಯ ಮಟ್ಟಕ್ಕೆ ಭದ್ರಾ ನದಿ ನೀರಿನ ಪ್ರಮಾಣ ಏರಿಕೆಯಾಗಿದೆ. ಯಾವುದೇ ಕ್ಷಣದಲ್ಲಿ ಸೇತುವೆ ಮುಳುಗಡೆಯಾಗಲಿದೆ.ಕುದುರೆಮುಖ ಘಟ್ಟದ ಸಾಲಿನಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಆದ್ದ–ರಿಂದ ಕಳಸದ ಹೆಬ್ಬಾಳೆ ಸೇತುವೆ ಮುಳಗುವ ಭೀತಿ ಎದುರಾಗಿದೆ. ಇದರಿಂದಾಗಿ ವಾಹನ ಸಂಚಾರಕ್ಕೆ ತೆ–ಊಂದರೆ ಉಂಟಾಗುತ್ತದೆ.ಪ್ರತಿ ವರ್ಷವೂ ಮಳೆಗಾಳದಲ್ಲಿ ಭದ್ರಾ ನದಿಗೆ ಅಡ್ಡಲಾಗಿ ನಿರ್ಮಾಣ ಮಾಡಿರುವ ಸೇತುವೆ ಮುಳುಗಡೆಯಾಗುತ್ತದೆ. ಹಳೆಯ ಸೇತುವೆ ಪಕ್ಕದಲ್ಲಿ ಹೊಸ ಸೇತುವೆ ನಿರ್ಮಾಣ ಮಾಡಲಾಗುತ್ತಿದೆ. ಆದರೆ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಹೆಬ್ಬಾಳೆ ಸೇತುವೆ ಮುಳುಗಡೆಯಾದರೆ ಹೊರನಾಡು ಹಾಗೂ ಹಲವು ಗ್ರಾಮಗಳ ಸಂಪರ್ಕ ಕಡಿತವಾಗಲಿದೆ. ಯಾವುದೇ ಸಮಯದಲ್ಲಾದರೂ ಹೆಬ್ಬಾಳ ಸೇತುವೆ ಮುಳುಗಡೆ ಸಾಧ್ಯತೆ ಇರುವ ಕಾರಣ ಸ್ಥಳದಲ್ಲಿ ಬ್ಯಾರಿಕೇಡಿ ಹಾಕಿ ವಾಹನ ಸಂಚಾರ ಬಂದ್ ಮಾಡಲಾಗಿದೆ. ಕಳೆದ ಎರಡು ವಾರದಿಂದ ಚಿಕ್ಕಮಗಳೂರು, ಶಿವಮೊಗ್ಗ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಮಳೆ ಅಬ್ಬರಿಸುತ್ತಿದೆ. ಜುಲೈ 12ರ ತನಕ ಮಳೆಯ ಅಬ್ಬರ ಮುಂದುವರೆಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

## ಮುನ್ಯಾಳ ಗ್ರಾಮದಲ್ಲಿ ಆರ್‌ಡಿಎಸ್ ಪದವಿ ಮಹಾ ವಿದ್ಯಾಲಯದಿಂದ ಎನ್.ಎಸ್.ಎಸ್. ವಾರ್ಷಿಕ ಶಿಬಿರ

**ಮೂಡಲಗಿ :** ಪಟ್ಟಣದ ಆರ್‌ಡಿಎಸ್ ಕಲಾ ವಾಣಿಜ್ಯ ವಿಜ್ಞಾನ ಹಾಗೂ ಸಮಾಜಕಾರ್ಯ ಪದವಿ ಮಹಾ ವಿದ್ಯಾಲಯ ಹಾಗೂ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಕೋಶದ ವತಿಯಿಂದ ಸಮೀಪದ ದತ್ತು ಗ್ರಾಮ ಮುನ್ಯಾಳದಲ್ಲಿ ದಿನಾಂಕ 11–07–2024 ರಿಂದ 17–07–2024 ರವರೆಗೆ ಎನ್.ಎಸ್.ಎಸ್. ವಾರ್ಷಿಕ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ದಿನಾಂಕ 11–07–2024 ರಂದು ಮಧ್ಯಾಹ್ನ 3 ಘಂಟೆಗೆ ಶಿಬಿರದ ಉದ್ಘಾಟನೆ ನಡೆಸಲಾಗುವುದು ಉದ್ಘಾಟಕರಾಗಿಮುನ್ಯಾಳ ಗ್ರಾಮಪಂಚಾಯತ ಅಧ್ಯಕ್ಷರಾದದುರ್ಗವ್ವ ಸಂ. ಜಂಬಗಿ ಆಗಮಿಸುವರು ಅಧ್ಯಕ್ಷತೆಯನ್ನು ಮೂಡಲಗಿಯ ಆರ್. ಡಿ.ಸಂಸ್ಥೆಯ ಅಧ್ಯಕ್ಷರಾದ ಸಂತೋಷ ತಮ್ಮಣ್ಣಾ ಪಾರ್ಶಿ ವಹಿಸಿ ಕೊಳ್ಳುವರು ಮುಖ್ಯ ಅತಿಥಿಗಳು ಮುನ್ಯಾಳ ಗ್ರಾಮ ಪಂಚಾಯತ ಉಪಾಧ್ಯಕ್ಷರಾದ ಉದಯ ರಾ. ಸನದಿ ಗ್ರಾಮದ ಕೆಂಎಮ್‌ಎಫ್‌ನ ಅಧ್ಯಕ್ಷರಾದಬಾಬುಗೌಡ ನಾಯ್ಕ ಪಿಕೆಪಿಎಸ್‌ನ ಅಧ್ಯಕ್ಷರಾದ ಹಣಮಂತ ಹಾ.ಒಂಟಗೋಡಿ ಮೂಡಲಗಿ ಚೈತನ್ಯ ಬ್ಯಾಂಕಿನ ಅಧ್ಯಕ್ಷರಾದ ತಮ್ಮಣ್ಣ ಬಾ. ಕೆಂಚರಡ್ಡಿ ಮುನ್ಯಾಳ ಗ್ರಾಮದ ಪಿಡಿಓ ಶ್ರೀಶೈಲ ತಡಸನ್ನವರ ಪ್ರಾಥಮಿಕ & ಪ್ರೌಢ ಶಾಲೆಗಳ ಪ್ರಧಾನ ಗುರುಗಳು ಕಾಲೇಜಿನ ಪ್ರಾಚಾರ್ಯರು ಹಾಗೂ ಉಪನ್ಯಾಸಕರು ಶಿಬಿರಾರ್ಥಿಗಳು ಪಾಲ್ಗೊಳ್ಳುವರು ಮತ್ತು ಶಿಬಿರದಲ್ಲಿ ಪ್ರತಿ ದಿನ ವಿಷಯ ಪರಿಣಿತರಿಂದ ವಿವಿಧ ವಿಷಯಗಳ ಉಪನ್ಯಾಸಕ ಮಾಲಿಕೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಎನ್.ಎಸ್.ಎಸ್. ಘಟಕಾಧಿಕಾರಿ ಉಪನ್ಯಾಸಕ ಪಿ.ಬಿ. ಚೌಡಕಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಕಣಿವೆ ಬಿಳಚಿ ಗ್ರಾಮದಲ್ಲಿ ಕಸ ವಿಲೇವಾರಿ ಘಟಕ ಮತ್ತು ಹೈಟೆಕ್ ಶೌಚಾಲಯವನ್ನು ಉದ್ಘಾಟನೆ ಮಾಡಿದ

# ಶಾಸಕ ಕೆ.ಎಸ್.ಬಸವಂತಪ್ಪ

ದಾವಣಗೆರೆ: ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯದ ಕೊರತೆಯಿಂದ ಡೆಂಗ್ಯು ಮತ್ತು ಮಲೇರಿಯಾದಂತಹ ಮಾರಣಾಂತಿಕ ಕಾಯಿಲೆಗಳು ಹೆಚ್ಚುತ್ತಿದ್ದು, ರೋಗಗಳನ್ನು ನಿಯಂತ್ರಿಸಲು ಗ್ರಾಮಗಳ ಸ್ವಚ್ಚತೆಗೆ ಪ್ರತಿಯೊಬ್ಬರೂ ಬದ್ಧರಾಗಬೇಕೆಂದು ಶಾಸಕ ಕೆ.ಎಸ್.ಬಸವಂತಪ್ಪ ಸಲಹೆ ನೀಡಿದರು. ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಕಣಿವೆಬಿಳಚಿ ಗ್ರಾಮದಲ್ಲಿ ಇತ್ತೀಚಿಗೆ ಆಯೋಜಿಸಿದ್ದ ಕಸ ವಿಲೇವಾರಿ ಘಟಕ, ಹೈಟೆಕ್ ಶೌಚಾಲಯ ಮತ್ತು ಅಂಬೇಡ್ಕರ್ ಭವನ ಉದ್ಘಾಟಿಸಿ ಅವರು ಮಾತನಾಡಿದರು. ಕಸ ಮುಕ್ತ ವಾತಾವರಣ ಕಲ್ಪಿಸಲು ಪ್ರತಿ ಗ್ರಾಮಗಳಲ್ಲಿ ಕಸ ವಿಲೇವಾರಿ ಘಟಕಗಳನ್ನು ಸ್ಥಾಪಿಸಿದ್ದು, ಕಸ ಸಂಗ್ರಹಣೆಗಾಗಿ ಮನೆಗಳ ಬಾಗಿಲಿಗೆ



ಬರುವ ವಾಹನಕ್ಕೆ ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸಿ ಹಾಕಬೇಕು. ಮನೆಗಳ ಸಮೀಪ ಹಾಗೂ ಚರಂಡಿಗಳಿಗೆ ಕಸವನ್ನು ಹಾಕದೇ ಸರ್ಕಾರ ರೂಪಿಸಿರುವ ಸ್ವಚ್ಚತಾ ಯೋಜನೆಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷೆ ಲತಾ ಶ್ರೀನಿವಾಸ್ ಮಾತನಡಿ, ಗ್ರಾಮೀಣ ಆರೋಗ್ಯ ರಕ್ಷಣೆಗೆ ಸರ್ಕಾರ ಸಾಕಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಗ್ರಾಮಸ್ಥರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಉಪಾಧ್ಯಕ್ಷ ಪರಮೇಶ್ವರಪ್ಪ, ಸದಸ್ಯ ಎಸ್.ಅಣ್ಣೋಜಿರಾವ್, ಪಂಚಾಯತ್‌ರಾಜ್ ಇಲಾಖೆ ಎಂಜಿನಿಯರ್ ಬಸವರಾಜಪ್ಪ, ಪಿಡಿಒ ಮಂಜುನಾಥ್, ಸ್ತ್ರೀಶಕ್ತಿ ಸಂಘದ ಸದಸ್ಯರು, ಗ್ರಾಮಸ್ಥರು ಭಾಗವಹಿಸಿದ್ದರು.



## ಮಾಧ್ಯಮ ಅಕಾಡೆಮಿ ಅಧ್ಯಕ್ಷರಾಗಿ ಆಯೇಷಾ ಖಾನಂ ನೇಮಕ.

ಬೆಂಗಳೂರು:ಕರ್ನಾಟಕ ಮಾಧ್ಯಮ ಅಖಾಡಮಿಗೆ ಅಧ್ಯಕ್ಷರನ್ನಾಗಿ ಹಿರಿಯ ಪತ್ರಕರ್ತರಾದ ಆಯೇಷಾ ಖಾನಂ ರವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಇವರಜೊತೆಯಲ್ಲೇ ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯರುಗಳನ್ನಾಗಿ ಹಿರಿಯ ಅನುಭವಿ ಪತ್ರಕರ್ತರುಗಳಾದ ಶ್ರೀ ಎಂ.ಎನ್.ಅಹೋ ಬಳಪತಿ,ಶ್ರೀ ಕೆ.ವೆಂಕಟೇಶ್,ಶ್ರೀ ಕೆ.ನಿಂಗಜ್ಜ ರವರನ್ನು ಸದಸ್ಯರನ್ನಾಗಿ ನೇಮಕಮಾಡಿ ಆದೇಶ ನೀಡಿದ್ದಾರೆ.ಇವರೆಲ್ಲರಿಗೂ ಸಹಾಯವಾಣಿ ಕನ್ನಡ ದಿನಪತ್ರಿಕೆ ಬೆಂಗಳೂರು ಹಾಗೂ ಪವಿತ್ರಪ್ರಜಾ ಕನ್ನಡ ದಿನಪತ್ರಿಕೆ ದಾವಣಗೆರೆಯ ಬಳಗ ಅಭಿನಂದನೆ ಸಲ್ಲಿಸುತ್ತದೆ.

# ಬಿಪಿಎಲ್ ಕಾರ್ಡ್‌ಗಳಿಗೆ ಕತ್ತರಿ..?

ಮುಖ್ಯಮಂತ್ರಿ ಸಿದ್ದರಾಮಯ್ಯ ಸತತ ಎರಡು ದಿನಗಳ ಕಾಲ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಿದರು. ಸಭೆಯಲ್ಲಿ ಹಲವು ವಿಚಾರಗಳು ಚರ್ಚೆಯಾಗಿವೆ. ಪ್ರಮುಖವಾಗಿ ಬಿಪಿಎಲ್ ಕಾರ್ಡ್‌ಗಳ ಕುರಿತು ಮಹತ್ವದ ಚರ್ಚೆ ನಡೆದಿದೆ.ಸಭೆಯಲ್ಲಿ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಬಿಪಿಎಲ್ ಕಾರ್ಡ್‌ಗಳ ಸಂಖ್ಯೆ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಅನರ್ಹರು ಬಿಪಿಎಲ್ ಕಾರ್ಡ್ ಪಡೆದಿರುವ ಕುರಿತು ಅಧಿಕಾರಿಗಳ ಜೊತೆ ಚರ್ಚಿಸಿದ್ದಾರೆ. ಅನರ್ಹರ ಬಿಪಿಎಲ್ ಕಾರ್ಡ್ ರದ್ದುಗೊಳಿಸಿ, ಅವರ ಕಾರ್ಡ್ ಅನ್ನು ಎಪಿಎಲ್ ಕಾರ್ಡ್ ಆಗಿ ಪರಿವರ್ತಿಸಲು ಸೂಚನೆ ನೀಡಿದ್ದಾರೆ. ಅಧಿಕಾರಿಗಳು ಸಭೆಯಲ್ಲಿ ನೀಡಿರುವ ಮಾಹಿತಿ ಅನ್ವಯ ರಾಜ್ಯದಲ್ಲಿ 1.27 ಕೋಟಿ ಬಿಪಿಎಲ್ ಕುಟುಂಬಗಳಿವೆ. ಆದರೆ 4.37 ಕೋಟಿ ಬಿಪಿಎಲ್ ಕಾರ್ಡ್‌ಗಳಿವೆ. ಅಲ್ಲದೇ ಹೊಸದಾಗಿ ಬಿಪಿಎಲ್ ಕಾರ್ಡ್‌ಗಳಿಗಾಗಿ 2.95 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿದ್ದು, ವಿಲೇವಾರಿಯಾಗಬೇಕಿದೆ. ನೀತಿ ಆಯೋಗದ ವರದಿ ಪ್ರಕಾರ ರಾಜ್ಯದಲ್ಲಿ ಬಡವರ ಸಂಖ್ಯೆ ಕಡಿಮೆಯಾಗಿದೆ. ಆದರೆ ಬಿಪಿಎಲ್ ಕಾರ್ಡ್‌ಗಳ ಸಂಖ್ಯೆ ಕಡಿಮೆಯಾಗಿಲ್ಲ. ಇದಕ್ಕೆ ಕಾರಣವೇನು? ಎಂದು ಸಿದ್ದರಾಮಯ್ಯ ಅಧಿಕಾರಿಗಳ ಜೊತೆ ಚರ್ಚಿಸಿದ್ದಾರೆ. ಬಿಪಿಎಲ್ ಕಾರ್ಡ್ ಹೊಂದಿರುವ ಅನರ್ಹರನ್ನು ಗುರುತಿಸಿ ಅವರ ಕಾರ್ಡ್ ಅನ್ನು ಎಪಿಎಲ್ ಕಾರ್ಡ್ ಆಗಿ ಪರಿವರ್ತನೆ ಮಾಡಿ ಎಂದು ಸೂಚನೆ ನೀಡಿದ್ದಾರೆ.

## ಇಂಧನ ಇಲಾಖೆ ಕುರಿತು ಜಿಲ್ಲೆಯ ಚುನಾಯಿತ ಜನಪ್ರತಿನಿಧಿಗಳೊಂದಿಗೆ ಸಭೆ

# ಸದ್ಯದಲ್ಲೇ 2000 ಲೈನ್‌ಮೆನ್‌ಗಳ ನೇಮಕ : ಇಂಧನ ಸಚಿವ ಕೆ.ಜೆ.ಜಾರ್ಜ್

**ರಾಯಚೂರು :** ಇಂಧನ ಇಲಾಖೆಗೆ ಸದ್ಯದಲ್ಲೇ 2,000 ಲೈನ್‌ಮೆನ್‌ಗಳ ನೇಮಕ ಆಗಲಿದ್ದು, ಈ ಸಂಬಂಧ 15ದಿನಗಳಲ್ಲಿ ಅಧಿಸೂಚನೆ ಹೊರಡಿಸಲಾಗುವುದು ಎಂದು ಇಂಧನ ಸಚಿವರು ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಜೆ.ಜಾರ್ಜ್ ಅವರು ಹೇಳಿದ್ದಾರೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಂಧನ ಇಲಾಖೆಯ ಸಂಬಂಧಿಸಿದಂತೆ ಜಿಲ್ಲೆಯ ಚುನಾಯಿತ ಜನಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲೈನ್‌ಮೆನಗಳ ಹುದ್ದೆಗೆ ರಾಜ್ಯಾದ್ಯಂತ ಒಂದೇ ದಿನ ನೇಮಕ ಪ್ರಕ್ರಿಯೆ ನಡೆಯಲಿದ್ದು, ಪಾರದರ್ಶಕತೆಗೆ ಒತ್ತು ನೀಡಲಾಗುತ್ತದೆ, ಎಂದರು.

ವೈಟಿಪಿಎಸ್ ಹುದ್ದೆಗಳನ್ನು ಭರ್ತಿ ಮಾಡುವಾವಾಗ ಸ್ಥಳಿಯರಿಗೆ ಆದ್ಯತೆ ನೀಡಬೇಕು ಮತ್ತು 371 (ಜೆ) ಅನ್ವಯ ಮೀಸಲು ನೀಡಬೇಕು. ಆದರೆ ನುರಿತ ಕೆಲಸಗಾರರು ಸಿಗುತ್ತಿಲ್ಲ ಎಂಬ ಕಾರಣಕ್ಕೆ ಸ್ಥಳೀಯರ ನೇಮಕ ಆಗುತ್ತಿಲ್ಲ ಎಂಬ ಮಾತು ಕೇಳಿಬಂದಿದೆ.



ಆದ್ದರಿಂದ ಎಷ್ಟು ಜನ ಬೇಕು ಅಂತ ನಿರ್ಧರಿಸಿ, ಅವರಿಗೆ ಕೆಪಿಸಿಎಲ್‌ನಿಂದ ಅಗತ್ಯ ತರಬೇತಿ ಕೊಡಿಸಲು ಅಗತ್ಯ ಕ್ರಮ ವಹಿಸಲಾಗುವುದು. ನಮ್ಮ ರಾಜ್ಯದ ಯುವ ಜನರಿಗೆ ಉದ್ಯೋಗಾವಕಾಶ ಕಲ್ಪಿಸುವ ಜತೆಗೆ, ಆ ಉದ್ಯೋಗಕ್ಕೆ ಪೂರಕವಾದ ಕೌಶಲ್ಯ ತರಬೇತಿ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ಹೆಚ್ಚಿನ ಆದ್ಯತೆ ನೀಡುತ್ತದೆ ಎಂದು ತಿಳಿಸಿದರು.

ಈಗಾಗಲೇ 1000 ಸಹಾಯಕ ಇಂಜಿನಿಯರ್‌ಗಳ (ಎ.ಇ) ಕಿರಿಯ ಇಂಜಿನಿಯರ್‌ಗಳ (ಜೆ.ಇ) ನೇಮಕ ಮಾಡಿ ಕಾರ್ಯಾದೇಶವನ್ನೂ ನೀಡಿದ್ದೇವೆ. ಇಂಧನ ಇಲಾಖೆಗೆ ಹೊಸದಾಗಿ ನೇಮಕಗೊಂಡಿರುವ 400 ಸಹಾಯಕ ಇಂಜಿನಿಯರ್‌ಗಳಿಗೆ ಇತ್ತೀಚೆಗೆ ಕಾರ್ಯಾನುಭವ ತರಬೇತಿ ನೀಡಲಾಗಿದೆ. ತ್ವರಿತ ನೇಮಕಾತಿಗಾಗಿ ಈ ಅಭ್ಯರ್ಥಿಗಳು ನನಗೆ ಮನವಿ ಸಲ್ಲಿಸಿದ್ದರು. ಇಲಾಖೆಯ ಹಿರಿಯ ಅಧಿಕಾರಳ ನಿರಂತರ ಪ್ರಯತ್ನದಿಂದ 6 ತಿಂಗಳೊಳಗೆ ನೇಮಕ ಆದೇಶ ನೀಡಲಾಗಿದೆ," ಎಂದು ಅವರು ಹೇಳಿದರು.

ಆರ್‌ಟಿಪಿಎಸ್, ವೈಟಿಪಿಎಸ್‌ಗೆ ಸಚಿವರ ಭೇಟಿ, ಪರಿಶೀಲನೆ; ರಾಯಚೂರಿನ ಆರ್‌ಟಿಪಿಎಸ್, ವೈಟಿಪಿಎಸ್‌ಗೆ ಇಂಧನ ಸಚಿವರು ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಜೆ.ಜಾರ್ಜ್ ಅವರು ಬುಧವಾರ ಭೇಟಿ ನೀಡಿದರು. ಮೊದಲು ವೈಟಿಪಿಎಸ್‌ಗೆ ಭೇಟಿ ಅಧಿಕಾರಿಗಳೊಂದಿಗೆ ಸಭೆ ಮಾಡಿ, ನಂತರ ಶಕ್ತಿನಗರದ ಅತಿಥಿ ಗೃಹದಲ್ಲಿ ಊಟ ಮಾಡಿ, ಆರ್‌ಟಿಪಿಎಸ್‌ಗೆ ಭೇಟಿ ನೀಡಿದರು. ಆರ್‌ಟಿಪಿಎಸ್‌ನ ಯೂನಿಟ್–06 ಘಟಕವು ಸತತ 103 ದಿನಗಳ ಕಾಲ ಕಾರ್ಯನಿರ್ವಹಣೆ ಹಿನ್ನಲೆಯಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ ಕೇಕ್ ಕತ್ತರಿಸುವ ಮೂಲಕ ಸಂಭ್ರಮ ಆಚರಣೆ ಮಾಡಿದರು. ಆರ್‌ಟಿಪಿಎಸ್‌ನ ವಿವಿಧ



ಘಟಕಗಳಿಗೆ ಇದೇ ವೇಳೆ ಭೇಟಿ ನೀಡಿ, ಅಲ್ಲಿಯ ಅಧಿಕಾರಿಗಳೊಂದಿಗೆ ಮಾಹಿತಿ ಪಡೆದರು.

ಇದೇ ಸಂದರ್ಭದಲ್ಲಿ ರಾಯಚೂರು ನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಶಿವರಾಜ್ ಪಾಟೀಲ್, ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕ ಹಂಪಯ್ಯ ನಾಯಕ್, ಲಿಂಗಸೂಗೂರು ವಿಧಾನಸಭಾ ಕ್ಷೇತ್ರದ ಶಾಸಕ ಮಾನಪ್ಪ ಡಿ.ವಜ್ಜಲ್, ಮಸ್ಕಿ ವಿಧಾನಸಭಾ ಕ್ಷೇತ್ರದ ಶಾಸಕ ಬಸವರಾಜ್ ತುರುವಿನಹಾಳ್, ವಿಧಾನ ಪರಿಷತ್ ಸದಸ್ಯ ಎ.ವಸಂತಕುಮಾರ್, ಇಂಧನ ಇಲಾಖೆ ಅಪರ ಮುಖ್ಯಕಾರ್ಯದರ್ಶಿ ಗೌರವ್ ಗುಪ್ತಾ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಅಪರ ಜಿಲ್ಲಾಧಿಕಾರಿಗಳಾದ ಡಾ.ಕೆ.ಆರ್. ದುರುಗೇಶ್ ಹಾಗೂ ಜೆಸ್ಕಾಂ, ಆರ್‌ಟಿಪಿಎಸ್, ವೈಟಿಪಿಎಸ್ ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಇದ್ದರು.

# ಕೇಂದ್ರ ಸರ್ಕಾರದ ವಿರುದ್ಧ ಉಗ್ರ ಹೋರಾಟ




ಕೇಂದ್ರ ಸರ್ಕಾರ ದೆಹಲಿಯ ಹಳೆಯ ಸಂಸತ್ ಭವನದ ಮುಂದೆ ಇರುವ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಮತ್ತು ಛತ್ರಪತಿ ಶಿವಾಜಿ ಮಹಾರಾಜರ ಮೂರ್ತಿಗಳನ್ನು ತೆರವುಗೊಳಿಸಿರುವದನ್ನು ಖಂಡಿಸಿ ಇಂದು ಬುದ್ಧ ಬಸವ ಅಂಬೇಡ್ಕರ್ ಸೇವಾ ಸಂಸ್ಥೆ ಅಧ್ಯಕ್ಷರಾದ ತುಳಸಿ ಹರಿಜನ ಅವರ ನೇತೃತ್ವದಲ್ಲಿ ಹಾಗೂ ಎಲ್ಲ ದಲಿತ ಸಂಘಟನೆಗಳ ಸಹಯೋಗದಲ್ಲಿ ವಿಜಯಪುರದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಉಗ್ರ ಹೋರಾಟ ನಡೆಸಿ ಮಾನ್ಯ ಜಿಲ್ಲಾಧಿಕಾರಿಗಳ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು

## ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

2023 – 24 ನೇ ಸಾಲಿನಲ್ಲಿ ಎಸೆಸೆಲ್ಸಿ ಮತ್ತು ಪಿಯುಸಿ ದ್ವಿತೀಯ ವರ್ಷ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಪಟ್ಟಿ.

**SSLC:**

1. ಪೃಥ್ವಿ ದೇವೇಂದ್ರಪ್ಪ ಕಪನೂರ – 98.5%
2. ವಿರಾಜ್ ಗುರುಪ್ರಕಾಶ್ ಮುಗಳಿ– 95.3%
3. ಮನೋಜ್ಞ ಗುರುರಾಜ ದೇಶಪಾಂಡೆ– 89.6%
4. ಕಾಯಕ ಮಹಾದೇವ ವಡಗಾಂವ– 89%
5. ಸಾವಿತ್ರಮ್ಮ ಬುರ್ಲಿ–86.8%
6. ಭವಾನಿ ಕಾಶಿನಾಥ್ ಗುತ್ತೇದಾರ್ – 81%

**PUC- 2 years:**


1. ಗಂಗಾಂಬಿಕಾ ದೇವೇಂದ್ರಪ್ಪ ಆವಂಟಿ– 99.3%
2. ಸಮೀರ್ ಶಾಮ್ ಸುಂದರ್ ಕುಲಕರ್ಣಿ –94%
3. ಸ್ಪಂದನಾ ಸಿದ್ದರಾಮ ನಡಗೇರಿ– 93%
4. ಸೃಜನಾ ಸಂಗಮನಾಥ ರೇವತಗಾಂವ– 92%
5. ಪ್ರಶಾಂತ್ ಸುಭಾಷ್ ಬಣಗಾರ– 87%
6. ಐಶ್ವರ್ಯ ರಾಘವೇಂದ್ರ ಶರ್ಮ – 86%
7. ಶಿವರಾಜ ದಿಂಡೂರೆ– 83.83%
8. ಭಾಗೇಶ್ ಶಾಂತಪ್ಪ ಕೋರೆ– 83.57%
9. ಅಶ್ವಿನಿ ವಿನೋದ ದೇಸಾಯಿ– 82.83%
10. ಪೂಜಾ ಶರಣಬಸಪ್ಪ ಬಿ – 82.1%.

ಪ್ರತಿಭಾ ಪುರಸ್ಕೃತರನ್ನು ಜುಲೈ ತಿಂಗಳಲ್ಲಿ ನಡೆಯುವ ಪತ್ರಿಕಾ ದಿನಾಚರಣೆ ಸಮಾರಂಭದಲ್ಲಿ ಸನ್ಮಾನಿಸಿ ಗೌರಿಸಲಾಗುವುದು

## ಕೇಂದ್ರ ಸರ್ಕಾರದ ವಿರುದ್ಧ ಉಗ್ರ ಹೋರಾಟ

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಇದೇ 2024ರ ಜು.13ರಂದು ಬೆಂಗಳೂರಿನಲ್ಲಿ ಮಾಗಡಿರಸ್ತೆಯ ಸುಮನಹಳ್ಳಿ ವೃತ್ತ ಡಾ.ಬಾಬು ಜಗಜೀವನ ರಾಮ್ ಭವನದ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯಿಂದ 02 ಸರ್ಕಾರಿ ಕೆಂಪು ಬಸ್ಸುಗಳ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಆಸಕ್ತರು 2024ರ ಜು.12ರ ಸಂಜೆ 5.00ಗಂಟೆಗೆ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಹಾಜರಾಗಬಹುದಾಗಿದೆ. ಉದ್ಘಾಟನಾ ಸಮಾರಂಭ ಕಾರ್ಯಕ್ರಮಕ್ಕೆ ತೆರಳುವ ಸಾರ್ವಜನಿಕರಿಗೆ ತಿಂಡಿ, ಊಟ, ಕಾಫಿ, ಟೀ ವ್ಯವಸ್ಥೆ ಮಾಡಲಾಗಿದ್ದು, ಮೊದಲು ಬರುವ ಪ್ರಯಾಣಿಕರಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಅವರು ಪ್ರಟಣೆಯಲ್ಲಿ ತಿಳಿಸಿದ್ದಾರೆ.




## ಶಾಸಕರಿಂದ ಕಾಮಗಾರಿಗಳಿಗೆ ಚಾಲನೆ

–1ನೇ ಪುಟದಿಂದ

ಒಟ್ಟು 11ಶೌಚಾಲಯಗಳಿಗೆ ಮಂಜೂರಾಗಿದ್ದು,8 ಶೌಚಾಲಯಗಳು,3 ಮೂತ್ರಾಲಯಗಳಿವೆ. ಇದರಲ್ಲಿ 1ಹೈಟೆಕ್ ಶೌಚಾಲಯವನ್ನು ಹೊಸ ಬಸ್ ನಿಲ್ದಾಣದಲ್ಲಿ ನಿರ್ಮಿಸಲಾಗುವುದು. ಉಳಿದೆರಡು ಪಟ್ಟಣದಲ್ಲಿ ಅತೀ ಅಗತ್ಯವಿರುವ ನಾನಾ ಕಡೆ ನಿರ್ಮಿಸಲಾಗುವುದು. 8 ಶೌಚಾಲಯಗಳಲ್ಲಿ 5 ನಾನಾ ಸಮುದಾಯ ಆಧಾರಿತ ಸ್ಥಳಗಳಲ್ಲಿ ನಿರ್ಮಿಸಿ ಹಸ್ತಾಂತರಿಸಲಾಗುವುದು.
3 ಸಾರ್ವಜನಿಕ ಸಾರ್ವಜನಿಕ ಶೌಚಾಲಯಗಳಿವೆ ಎಂದರು.
ಈ ಸಂದರ್ಭದಲ್ಲಿ ಮಂಡಲ ಬಿಜೆಪಿ ಅಧ್ಯಕ್ಷ ಶಶಿಧರ ಹಣ್ಣಿ, ಯುವ ಮೋರ್ಚಾ ಅಧ್ಯಕ್ಷ ಪುನೀತ್ ದೊಡ್ಮನೆ,ಪುರಸಭೆ ಸದಸ್ಯರಾದ ವಾರದ ಗೌಸ್ ಮೊದ್ದೀನ್, ಸೊಪ್ಪಿನ ಮಂಜುನಾಥ, ಎಸ್.ತಿಮ್ಮಣ್ಣ, ಚಂದ್ರನಾಯ್ಕ , ಯು.ಹನುಮಂತಪ್ಪ, ಮಹ್ಮದ್ ರಫಿ, ಗುರುಬಸಮ್ಮ , ವೀರೇಶ, ಪುರಸಭೆ ಮಾಜಿ ಅಧ್ಯಕ್ಷ ಕೋಡಿಹಳ್ಳಿ ಕೊಟ್ರೇಶ, ಮುಖಂಡರಾದ ತಳಕಲ್ ಕರಿಬಸಪ್ಪ, ಕೆ.ಪತ್ರೇಶ, ಜೆಡಿಎಸ್ ಮುಖಂಡ ಪುತ್ರೇಶ ಇತರರಿದ್ದರು.

## ಸಾರ್ವಜನಿಕರ ಕುಂದು ಕೊರತೆ ಸಭೆ ಮುಂದೂಡಿಕೆ

ಇಲ್ಲಿಯ ಜಿಲ್ಲಾ ಲೋಕಾಯುಕ್ತ ಪೊಲೀಸರ ವತಿಯಿಂದ ಇದೇ ಜು.11ರ ಬೆಳಿಗ್ಗೆ 11ರಿಂದ ಮಧ್ಯಾಹ್ನಾ 2ಗಂಟೆಯವರೆಗೆ ಜಿಲ್ಲೆಯ ಮಾನ್ವಿ ನಗರದ ತಹಶೀಲ್ದಾರ್ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ, ಸಾರ್ವಜನಿಕರ ಕುಂದು–ಕೊರತೆ ಸಭೆಯನ್ನು ಕೆಲವು ಆಡಳಿತಾತ್ಮಕ ಕಾರಣಗಳಿಂದ ಸಭೆಯನ್ನು ಮುಂಡೂಡಲಾಗಿದೆ ಎಂದು ರಾಯಚೂರು ಕರ್ನಾಟಕ ಲೋಕಾಯುಕ್ತ ಪೋಲೀಸ್ ಅಧೀಕ್ಷಕರಾದ ಎಂ.ಎನ್.ಶಶಿಧರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಆಸಕ್ತರು 2024ರ ಜು.12ರ ಸಂಜೆ 5.00ಗಂಟೆಗೆ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಹಾಜರಾಗಬಹುದಾಗಿದೆ. ಉದ್ಘಾಟನಾ ಸಮಾರಂಭ ಕಾರ್ಯಕ್ರಮಕ್ಕೆ ತೆರಳುವ ಸಾರ್ವಜನಿಕರಿಗೆ ತಿಂಡಿ, ಊಟ, ಕಾಫಿ, ಟೀ ವ್ಯವಸ್ಥೆ ಮಾಡಲಾಗಿದ್ದು, ಮೊದಲು ಬರುವ ಪ್ರಯಾಣಿಕರಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಅವರು ಪ್ರಟಣೆಯಲ್ಲಿ ತಿಳಿಸಿದ್ದಾರೆ.

# ಸಾಂಕ್ರಾಮಿಕ ರೋಗದ ಭೀತಿ

ಸ್ವಚ್ಛತಾ ನಿಯಮ ಪಾಲಿಸಿ–ಜಾಧವ ತಾಳಿಕೋಟಿ: ರಾಜ್ಯಾದ್ಯಂತ ಸಾಂಕ್ರಾಮಿಕ ರೋಗಗಳಾದ ಡೆಂಘೀ, ಮಲೇರಿಯಾ ಹಾಗೂ ಚಿಕನ್ ಗುನ್ಯ ತೀವ್ರವಾಗಿ ಹರಡುತ್ತಿದ್ದು ಇದರ ನಿಯಂತ್ರಣಕ್ಕಾಗಿ ಸಾರ್ವಜನಿಕರು ನೈರ್ಮಲ್ಯಕ್ಕೆ ಹೆಚ್ಚು ಆದ್ಯತೆ ನೀಡಿ ಸ್ವಚ್ಛತಾ ನಿಯಮಗಳನ್ನು ಪಾಲಿಸುವ ಅಗತ್ಯ ಇದೆ ಎಂದು ಪುರಸಭೆ ಮುಖ್ಯಾಧಿಕಾರಿ ಮೋಹನ ಜಾಧವ ಹೇಳಿದರು. ಮಂಗಳವಾರ ಪತ್ರಿಕೆಯೊಂದಿಗೆ ಮಾತನಾಡಿದ ಅವರು ಇದರ ಕುರಿತು ಪುರಸಭೆಯು ಈಗಾಗಲೇ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಜೊತೆಗೆ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಲಿಕ್ಕಾಗಿಯೂ ಅದು ಪ್ರಯತ್ನಿಸುತ್ತಿದೆ ಎಲ್ಲವನ್ನೂ ಇಲಾಖೆಯ ಮೇಲೆಯೇ ಹಾಕಿ ಸಾರ್ವಜನಿಕರು ನಿಷ್ಕಾಳಜಿ ತೋರಬಾರದು ಇದಕ್ಕಾಗಿ ಪಟ್ಟಣದ ಜನರು ತಮ್ಮ ಮನೆಗಳ ಅಂಗಡಿ–ಮುಂಗಟ್ಟುಗಳು, ಹೊಟೆಲ್ ಗಳು, ವಾಣಿಜ್ಯ ಸಂಕೀರ್ಣಗಳು, ಸಾರ್ವಜನಿಕ ಸ್ಥಳಗಳು ಹಾಗೂ ಖಾಲಿ ಜಾಗಗಳಲ್ಲಿ ನೀರು ದೀರ್ಘಕಾಲ ನಿಲ್ಲದಂತೆ ನೋಡಿಕೊಳ್ಳಲು ಪ್ರಯತ್ನಿಸಬೇಕು ಇದಕ್ಕೆ ಪುರಸಭೆಯು ತಮ್ಮೊಂದಿಗೆ ಸಹಕರಿಸುತ್ತದೆ. ಜೊತೆಗೆ ಆವರಣಗಳೂ ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು. ನಿರುಪಯುಕ್ತ ಮತ್ತು ತ್ಯಾಜ್ಯ ವಸ್ತುಗಳಲ್ಲಿ ಮಳೆ ನೀರು ಸಂಗ್ರಹವಾಗದಂತೆ ಶೀಘ್ರ, ಸುರಕ್ಷಿತವಾಗಿ ವಿಲೇವಾರಿ ಮಾಡಲು ಪುರಸಭೆಯು ವಾಹನಗಳ ವ್ಯವಸ್ಥೆಯನ್ನು ಮಾಡಿದ್ದು ಈ ವಾಹನಗಳು ಪ್ರತಿ ವಾರ್ಡ ಗೂ ತಲುಪುವಂತೆ ಮಾಡಿದೆ ಅದನ್ನು ಬಳಸಿಕೊಂಡು ತ್ಯಾಜ್ಯವನ್ನು ಸಮಯಕ್ಕೆ ಸರಿಯಾಗಿ ವಿಲೇವಾರಿ ಮಾಡಬೇಕು. ತ್ಯಾಜ್ಯವನ್ನು ಹೆಚ್ಚು ದಿನಗಳವರೆಗೆ ಸಂಗ್ರಹಿಸಿ ಇಡಬೇಡಿ. ಸ್ವಚ್ಛತಾ ಕರ್ಮಿಗಳು ತಮ್ಮ ವಾರ್ಡ್ ಗಳಲ್ಲಿ ಬಂದಾಗ ಮನೆಯ ಮುಂದಿರುವಂತಹ ಚರಂಡಿಗಳನ್ನು ಸ್ವಚ್ಛಗೊಳಿಸಿಕೊಂಡು ಚರಂಡಿಯ ನೀರು ಸರಾಗವಾಗಿ ಹರಿಯುವಂತೆ ನೋಡಿಕೊಳ್ಳಬೇಕು. ಸಾರ್ವಜನಿಕರು ಸ್ವ–ಯಂ ಪ್ರೇರಿತರಾಗಿ ಸ್ವಚ್ಛತಾ ನಿಯಮಗಳನ್ನು ಪಾಲಿಸುತ್ತಾ ಪುರಸಭೆಯೊಂದಿಗೆ ಸಹಕರಿಸಬೇಕು ಎಂದು ಅವರು ತಿಳಿಸಿದರು.

# ಸಿಂಗಟಾಲೂರು ಬ್ಯಾರೇಜ್‌ನಲ್ಲಿನೀರು ಸಂಗ್ರಹ ಸಾಮಾರ್ಥ್ಯ ಹೆಚ್ಚಳ.



**ಹೂವಿನ ಹಡಗಲಿ :'**
ಸಿಂಗಟಾಲೂರು ನೀರಾವರಿ ಯೋಜನೆಯ ನೀರು ಸಂಗ್ರಹ ಸಾಮರ್ಥ್ಯವನ್ನು 506.80 ಮೀ.ನಿಂದ 507.50 ಮೀ.ವರೆಗೆ ಹೆಚ್ಚಿಸಲಾಗಿದೆ.

ಇತ್ತೀಚೆಗೆ ಗದಗನಲ್ಲಿ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಈ ತೀರ್ಮಾನ ತೆಗೆದು ಕೊಳ್ಳಲಾಗಿದೆ.
ಪ್ರಸ್ತುತ ಬ್ಯಾರೇಜ್ ಯೋಜನೆಯ 509.00 . ಅಂ–ದರೆ 3.12 ಟಿಎಂಸಿ ನೀರನ್ನು ಸಂಗ್ರಹಿಸುವ ಸಾಮರ್ಥ್ಯ ಹೊಂದಿದ್ದು, ಸದ್ಯ 506.80 . 1.90 ಟಿ.ಎಂ.ಸಿ. ನೀರನ್ನು ಸಂಗ್ರಹಿಸಲಾಗುತ್ತಿದೆ. ಬ್ಯಾರೇಜ್ ಹಿನ್ನೀರಿನಿಂದ ಗದಗ ಜಿಲ್ಲೆಯ ಬಹುಗ್ರಾಮ ಕುಡಿವ ನೀರು ಸರಬರಾಜು ಯೋಜನೆ ಮೇಲೆ ಅವಲಂಬನೆಯಾಗಿರುವ ಮುಂಡರಗಿ–ಗದಗ ಮಾರ್ಗದ 16 ಗ್ರಾಮಗಳು ಹಾಗೂ ಗದಗ–ಬೆಟಗೇರಿ ಅವಳಿ ನಗರ ಪ್ರದೇಶಗಳಿಗೆ ಮತ್ತು ಹೂವಿನಹಡಗಲಿ ತಾಲೂಕಿನ ಕುಡಿವ ನೀರು ಸರಬರಾಜು ಯೋಜನೆಗಳಿಗೆ ಬೇಸಿಗೆಯಲ್ಲಿ ಕುಡಿವ ಪ್ರತಿ ನೀರಿಗೆ ತೊಂದರೆಯಾಗುತ್ತಿರುವ ಹಿನ್ನೆಲೆ ಬ್ಯಾ–ರೇಜ್ ನ ನೀರಿನ ಸಂಗ್ರಹ ಮಟ್ಟದಲ್ಲಿ 507. 50 ಮೀ ಗೆ ಹೆಚ್ಚಿಸಲಾಗಿದೆ. ಬ್ಯಾರೇಜ್ ನಲ್ಲಿ ಒಟ್ಟು 2.26 ಟಿಎಂಸಿ ನೀರನ್ನು ಸಂಗ್ರಹಿಸಬಹುದಾಗಿದೆ. ಈಗಾಗಲೇ ನೀರು ಸಂಗ್ರಹ ಸಾಮರ್ಥ್ಯಕ್ಕೆ ಅನುಗುಣವಾಗಿ ಭೂಸ್ವಾಧೀನ ಪಡಿಸಿಕೊಂಡಿದ್ದು, ಸಂತ್ರಸ್ತರು ಹಾಗೂ ರೈತರಿಗೆ ಪರಿಹಾರವನ್ನೂ ವಿತರಿಸಲಾಗಿದೆ.
ಹಂತ ಹಂತ ವಾಗಿ ನೀರು ಸಂಗ್ರಹ ಮಟ್ಟವನ್ನೂ ಹೆಚ್ಚಳ ಮಾಡಲಾಗುತ್ತಿದೆ. ಇದಕ್ಕೆ ಪೂರಕವಾಗಿ ನಾಳೆ ಜು.11 ರಿಂದ ಬ್ಯಾರೇಜ್‌ನ ಗೇಟುಗಳನ್ನು ಇಳಿಸಲು ಕ್ರಮ ಕೈಗೊಳ್ಳಲಾಗಿದೆ. ಆದ್ದರಿಂದ ಬ್ಯಾರೇಜಿನ ಹಿನ್ನೀರಿನಲ್ಲಿ ಮುಳುಗಡೆಯಾಗುವ ಜಮೀನುಗಳಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡದಂತೆ ಈಗಾಗಲೇ ಅಳವಡಿಸಿರುವ ಕೃಷಿ ಪಂಪ್ ಸೆಟ್‌ಗಳನ್ನು ತೆರವುಗೊಳಿಸಬೇಕು. ಜತೆಗೆ ಸಾರ್ವಜನಿಕರು ಈ ಪ್ರದೇಶಗಳಿಂದ ಜನ ಜಾನುವಾರುಗಳನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಗೊಂಡು, ನೀರಾವರಿ ಮತ್ತು ಕುಡಿವ ನೀರು ಪೂರೈಕೆ ಸಮರ್ಪಕವಾಗಿ ಅನುಷ್ಠಾನಗೊಳ್ಳಲು ಎರಡೂ ದಂಡೆಯ ಸಾರ್ವಜನಿಕರು ಸಹಕರಿಸಬೇಕೆಂದು ಕರ್ನಾಟಕ ನೀರಾವರಿ ನಿಗಮ, ಸಿಂಗಟಾಲೂರು ನೀರಾವರಿ ಯೋಜನೆಯ ಮುಂಡರಗಿ ವಿಭಾಗೀಯ ಕಾರ್ಯಪಾಲಕ ಎಂಜಿನಿಯರ್ ಪ್ರಕಾಶ ಐಗೋಳ ಮನವಿ ಮಾಡಿದ್ದಾರೆ.

# ಹಳಕಟ್ಟಿ ವಚನ ಸಾಹಿತ್ಯ ರಕ್ಷಿಸಿದ ಮಹಾನ್ ಚೇತನ–ಪತ್ತಾರ ತಾಳಿಕೋಟಿ




ಹಳಕಟ್ಟಿ ಅವರು ವಚನ ಸಾಹಿತ್ಯವನ್ನು ಬೆಳಕಿಗೆ ತಂದು ಸಂಶೋಧಿಸಿ ಪ್ರಕಟಿಸಿದ ಶತಮಾನದ ಮಹಾಮಹಿಮ ಆಗಿದ್ದಾರೆ ಎಂದು ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾದ ಸ್ವತಂತ್ರ ನಿರ್ದೇಶಕ ಹಾಗೂ ಚಿಂತಕ ಶ್ರೀಕಾಂತ ಪತ್ತಾರ ಹೇಳಿದರು. ಮಂಗಳವಾರ ಪಟ್ಟಣದ ಕಾಳಿಕಾ ಮಾತಾ ಮಂದಿರದ ಸಭಾಭವನದಲ್ಲಿ ತಾಲೂಕಾ ಶರಣ ಸಾಹಿತ್ಯ ಪರಿಷತ್ತು ವತಿಯಿಂದ ಡಾ.ಫ.ಗು. ಹಳಕಟ್ಟಿ ಅವರ ಜನ್ಮದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಉಪನ್ಯಾಸಕರಾಗಿ ಆಗಮಿಸಿ ಅವರು ಮಾತನಾಡಿದರು. ಡಾ.ಫ.ಗು. ಹಳಕಟ್ಟಿ ಅವರು ವಚನ ಸಾಹಿತ್ಯವನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ದ ಮಹಾನ್ ಚೇತನವಾಗಿದ್ದಾರೆ. ಏಳುನೂರು ಗಣಂಗಳ ವಚನಗಳಲ್ಲಿ ಅಡಗಿದ ಸಮ ಸಮಾಜದ ಪರಿಕಲ್ಪನೆಯನ್ನು ಅವರು ಜಗತ್ತಿಗೆ ಪರಿಚಯಿಸಿದರು. 12ನೇ ಶತಮಾನದಲ್ಲಿ ಕಲ್ಯಾಣ ಕ್ರಾಂತಿ ನಡೆದಾಗ ಬಸವಾದಿ ಶರಣರ ವಚನಗಳನ್ನು ರಕ್ಷಿಸಲು ಶರಣರು ತಾಡೋಲೆಗರ ಕಟ್ಟುಗಳನ್ನು ತಮ್ಮ ಜೋಳಿಗೆಯಲ್ಲಿರಿಸಿಕೊಂಡು ನಾಡಿನ ಮೂಲೆ ಮೂಲೆಗಳಲ್ಲಿ ಹೊರಟರು. ಮುಂದೆ ವಿಜಯನಗರದ ಲಕ್ಕಣ್ಣ ದಂಡೇಶ ಪ್ರಭುದೇವರಾಯರ ಕಾಲದಲ್ಲಿ ವಚನಗಳು ಬೆಳಕು ಕಂಡವು ಆದರೆ 1565ರ ತಾಳಿಕೋಟಿ ಕದನದಲ್ಲಿ ವಿಜಯನಗರ ಸಾಮ್ರಾಜ್ಯ ಸೋತು ಹೋಯಿತು ಇದರೊಂದಿಗೆ ವಚನಗಳ ಪ್ರಚಾರದ ಕೆಲಸವು ನಿಂತು ಹೋಯಿತು ಮತ್ತೆ 20 ನೇ ಶತಮಾನದ ಆರಂಭದಲ್ಲಿ ಅತ್ಯಂತ ಕಷ್ಟದಲ್ಲಿಯೂ ಡಾ.ಫ.ಗು. ಹಳಕಟ್ಟಿ ಅವರು ವಚನಗಳನ್ನು ಸಂಶೋಧಿಸಿ ಸಾಹಿತ್ಯವನ್ನು ಪ್ರಕಟಿಸಿ ವಚನ ಸಾಹಿತ್ಯವನ್ನು ರಕ್ಷಿಸುವ ಶ್ರೇಷ್ಠ ಕಾರ್ಯ ಮಾಡಿದರು ಎಂದು ತಿಳಿಸಿದರು. ಕೈಲಾಸ ಪೇಟೆ ತಾಳಿಕೋಟಿಯ ಪೂಜ್ಯ ಶ್ರೀ ಬಸವ ಪ್ರಭುದೇವರು ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ವೇದಿಕೆಯಲ್ಲಿ ವಿಶ್ವಕರ್ಮ ಸಮಾಜದ ಅಧ್ಯಕ್ಷ ಶ್ರೀನಿವಾಸ ಸೋನಾರ. ಕಸಾಪ ಅಧ್ಯಕ್ಷ ಆರ್.ಎಲ್.ಕೊಪ್ಪದ. ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಅಶೋಕ ಹಂಚಲಿ.ಕದಳಿ ವೇದಿಕೆ ಅಧ್ಯಕ್ಷೆ ಉಮಾ ಘಿವಾರಿ. ಯುವ ಘಟಕದ ಅಧ್ಯಕ್ಷ ಜಗದೀಶ ಬಿಳೇಭಾವಿ ಹಾಗೂ ಕಾರ್ಯಕ್ರಮದಲ್ಲಿ ಅ.ಭಾ.ಶ.ಸಾ.ಪ. ತಾಲೂಕ ಘಟಕದ ಉಪಾಧ್ಯಕ್ಷರಾದ ಗಂಗಾಧರ ಕಸ್ತೂರಿ. ಸಿ.ಎಂ. ಹಿರೇಮಠ. ಆರ್.ಆಯ್.ಜಾಲವಾದಿ. ಗುಂಡೂರಾವ ಧನಪಾಲ. ಪ್ರಧಾನ ಕಾರ್ಯದರ್ಶಿ ಸಾಹೇಬಗೌಡ ಬಿರಾದಾರ. ಸಹ ಕಾರ್ಯದರ್ಶಿ ಅಶೋಕ ಇಟಗಿ. ಸಂಘಟನಾ ಕಾರ್ಯದರ್ಶಿಗಳಾದ ಸಿದ್ದು ಕರಡಿ. ಸಿದ್ದನಗೌಡ ಚೌದರಿ. ಸದ್ದಾಂ ಕಕನೂರ. ಶ್ರೀಮತಿ ಸುನೀತಾ ಬಳಗಾನೂರ. ಮಲ್ಲನಗೌಡ ಪಾಟೀಲ. ಖಜಾಂಚಿ ಶಿವಲಿಂಗಪ್ಪ ಪಾಲ್ಕಿ. ದತ್ತಿ ಸಂಚಾಲಕರಾದ ಡಾ. ಸೋಮಶೇಖರಯ್ಯ ಹಿರೇಮಠ. ಸಂಗಮೇಶ ಪಾಲ್ಕಿ. ಯುವ ಘಟಕದ ಪದಾಧಿಕಾರಿಗಳು ಹಳಕಟ್ಟಿ ಅವರ ಅಭಿಮಾನಿಗಳು ಮತ್ತೀತರರು ಇದ್ದರು.



# 'ವಿಕ್ರಾಂತ್ ರೋಣ'

## ಬಳಿಕ ಮತ್ತೆ ಒಂದಾದ ಅನೂಪ್ ಭಂಡಾರಿ, ಕಿಚ್ಚ ಸುದೀಪ್; ಹೊಸ ಸಿನಿಮಾ ಕೆಲಸ

## ಎಲ್ಲಿಗೆ ಬಂತು...?

'ವಿಕ್ರಾಂತ್ ರೋಣ' ಸಿನಿಮಾ ಬಳಿಕ ನಿರ್ದೇಶಕ ಅನೂಪ್ ಭಂಡಾರಿ ಸುದೀಪ್ ಜತೆ ಹೊಸ ಸಿನಿಮಾ ಮಾಡುತ್ತಿದ್ದು, ಅದಕ್ಕಾಗಿ ಕಿಚ್ಚ ಸುದೀಪ್ ಈಗಾಗಲೇ ತಯಾರಿ ನಡೆಸಿದ್ದಾರೆ. ಈಗಾಗಲೇ ಅವರು ಇನ್ನೂ ಕೆಲ ಸಿನಿಮಾಗಳ ಕೆಲಸ ಮಾಡುತ್ತಿದ್ದಾರೆ.

'ವಿಕ್ರಾಂತ್ ರೋಣ' ಯಶಸ್ಸಿನ ಬಳಿಕ ಅನೂಪ್ ಭಂಡಾರಿ ಹಾಗೂ ಸುದೀಪ್ ಕಾಂಬಿನೇಶನ್‌ನ ಸಿನಿಮಾ ಬಗ್ಗೆ ಅಭಿಮಾನಿಗಳಿಗೆ ಸಹಜವಾಗಿ ಕುತೂಹಲ ಹೆಚ್ಚಿದೆ. ಸದ್ಯ ಈ ಪ್ರಾಜೆಕ್ಟ್ ಯಾವ ಹಂತದಲ್ಲಿದೆ ಎನ್ನುವುದರ ಬಗ್ಗೆ ನಿರ್ದೇಶಕ ಅನೂಪ್, 'ಸದ್ಯಕ್ಕೆ ಪ್ರೀ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಇನ್ನೂ ಮೂರ್ನಾಲ್ಕು ತಿಂಗಳುಗಳ ಕಾಲ ಈ ಕೆಲಸಗಳು ನಡೆಯಬಹುದು. ಅದಾದ ಬಳಿಕ ಶೂಟಿಂಗ್ ಶುರು ಮಾಡುವ ಆಲೋಚನೆ ಇದೆ. ಇನ್ನೊಂದು ತಿಂಗಳಲ್ಲಿ ಚಿತ್ರದ ಹೆಸರು ಹಾಗೂ ಉಳಿದ ವಿವರಗಳನ್ನು ಘೋಷಣೆ ಮಾಡುತ್ತೇವೆ. ಬಜೆಟ್, ಸ್ಕೇಲ್ ಹಾಗೂ ಉಳಿದೆಲ್ಲಾ ರೀತಿಯಲ್ಲಿನೋಡಿದರೂ ಇದು ಬಹಳ ದೊಡ್ಡ ಪ್ರಾಜೆಕ್ಟ್. ಅದಕ್ಕೆ ತಕ್ಕಂತೆ ತಯಾರಿ ಮಾಡಬೇಕು, ಒಂದೇ ಆಲೋಚನೆ ಇರುವಂತಹ ತಂಡ ಬೇಕು. ಇವೆಲ್ಲವನ್ನೂ ಯೋಚನೆಯಲ್ಲಿಟ್ಟುಕೊಂಡು ಈ ಸಿನಿಮಾ ಮಾಡಲಾಗುತ್ತಿದೆ' ಎಂದು ಹೇಳಿದ್ದಾರೆ.ಈ ಚಿತ್ರದಲ್ಲೂ ಹೊಸ ಪ್ರಪಂಚ ನಿರ್ಮಿಸುತ್ತಿರುವ ಬಗ್ಗೆ ಮಾಹಿತಿ ನೀಡಿರುವ ಅನೂಪ್,

'ಪ್ರತಿ ಸಿನಿಮಾದಲ್ಲೂಹೊಸ ಪ್ರಪಂಚ ಸೃಷ್ಟಿಸಲು ಇಷ್ಟ. ಒಂದು ಪ್ರಪಂಚ ಸೃಷ್ಟಿ ಮಾಡಿ, ಅದರಲ್ಲಿ ಕಥೆ ಹೇಳುವುದು ಬಹಳ ಇಷ್ಟದ ಕೆಲಸ. ಈ ಹಿಂದೆ 'ವಿಕ್ರಾಂತ್ ರೋಣ' ಮಾಡುವಾಗ ಅದು 'ರಂಗಿತರಂಗ 2' ಎಂಬ ಆಲೋಚನೆಯಲ್ಲೇ ಕಥೆ ಬರೆದಿದ್ದು. ಬಳಿಕ ಸುದೀಪ್ ಅವರಿಗೆಂದು ಕೆಲವು ಬದಲಾವಣೆಗಳನ್ನು ಮಾಡಿಕೊಂಡೆವು. ಆಗ ಈ ಸಿನಿಮಾ ಕಥೆಯೂ ರೆಡಿಯಿತ್ತು. ಆದರೆ, ಆಗ ಇದಕ್ಕೆ ಬೇಕಾದ ವಿಎಫ್‌ಎಕ್ಸ್‌ಗಳು ಹಾಗೂ ಇದಕ್ಕೆ ಬೇಕಾದ ಬಜೆಟ್, ಸ್ಕೇಲ್ ಎಲ್ಲವನ್ನೂ ನೀಡಬಹುದು ಎಂಬ ವಿಶ್ವಾಸ ಇರಲಿಲ್ಲ. ಹೀಗಾಗಿ ಇದನ್ನು ನಿಲ್ಲಿಸಿ, 'ವಿಕ್ರಾಂತ್ ರೋಣ' ಮಾಡಿದೆವು. ಈಗ ಈ ಸಿನಿಮಾ ಶುರು ಮಾಡುತ್ತಿದ್ದೇವೆ. ಸಂಪೂರ್ಣ ಬೇರೆ ದಿಕ್ಕಿನಲ್ಲಿ ಸಾಗುವಂತಹ ಕಥೆ ಇರುವ ಚಿತ್ರವಿದು. ಹಿಂದೆ ಮಾಡಿರುವ ಸಿನಿಮಾಗಳಿಗಿಂತ ಬಹಳ ವಿಭಿನ್ನವಾಗಿರುತ್ತದೆ' ಎಂದು ಹೇಳಿದ್ದಾರೆ."ಈ ಚಿತ್ರಕ್ಕಾಗಿಯೇ ಬೇರೆ ಒಂದು ಪ್ರಪಂಚವನ್ನು ಸೃಷ್ಟಿ ಮಾಡುತ್ತಿದ್ದೇವೆ. ದಿನನಿತ್ಯದ ಜೀವನದಲ್ಲಿಯಾರೂ ನೋಡಿರದಂತಹ ಪ್ರಪಂಚ ಇದಾಗಿರುತ್ತದೆ" ಎಂದಿದ್ದಾರೆ ನಿರ್ದೇಶಕ ಅನೂಪ್ ಭಂಡಾರಿ.ಗೆ ಸಹಕರಿಸಬೇಕು ಎಂದು ಅವರು ತಿಳಿಸಿದರು.

## ಫೇಮಸ್ ಫೋಟೋಗ್ರಾಫರ್ ಬಳಿ ಫೋಟೋ ಶೂಟ್ ಮಾಡಿಸಿದ



## ಮಾಲಾಶ್ರೀ ಪುತ್ರಿ ಆರಾಧನಾ

# ಬೆಳಗಾವಿಯಲ್ಲಿ ಕೈ ಅಭ್ಯರ್ಥಿ ಸೋಲು; ಕ್ಷಮೆ ಕೇಳಿದ ಸಿದ್ದರಾಮಯ್ಯ: ಲಕ್ಷ್ಮೀ ಹೆಬ್ಬಾಳಕರ್ ಹೇಳಿದ್ದೇನು?



ಬೆಂಗಳೂರು, ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಸೋಲನ್ನು ವಿನಯ ಪೂರ್ವಕವಾಗಿ ಸ್ವೀಕರಿಸುವೆ. ಭಾನುವಾರ ಬೆಳಗಾವಿ ನಾಯಕರ ಭೇಟಿ ವೇಳೆ ಸಿಎಂ ಸಿದ್ದರಾಮಯ್ಯ ಸ್ಸಾರಿ ಕೇಳಿದ್ದಾರೆ. ಸ್ಸಾರಿ ಕೇಳಿದ್ದು ಮುಖ್ಯಮಂತ್ರಿಯವರ ದೊಡ್ಡ ಗುಣ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಸಚಿವರು, ಬೆಳಗಾವಿಯ ಚುನಾವಣಾ ಫಲಿತಾಂಶ ಗಮನಿಸಿದರೆ ಬಿಜೆಪಿ ಹಾಗೂ ಎಂಇಎಸ್ ಒಂದಾದಂತೆ ಮೇಲ್ನೋಟಕ್ಕೆ ಕಾಣುತ್ತಿದೆ. ಕಳೆದ 25 ವರ್ಷಗಳಿಂದಲೂ ಬೆಳಗಾವಿಯಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಎಂಇಎಸ್ ನಡುವೆ ತ್ರಿಕೋನ ಸ್ಪರ್ಧೆ ಇತ್ತು. ಆದ-ರೆ, ಈ ಬಾರಿ ಆ ರೀತಿ ಆಗಿಲ್ಲ, ಸೋಲಿಗೆ ಅನೇಕ ಕಾರಣಗಳಿವೆ ಎಂದರು.

ವಿಧಾನಸಭೆ ವಾತಾವರಣ ಬೇರೆ, ಲೋಕಸಭಾ ಚುನಾವಣೆ ವಾತಾವರಣವೇ ಬೇರೆ. ಚುನಾವಣಾ ಲೆಕ್ಕಾಚಾರದ ಬಗ್ಗೆ ಹೇಳುವುದಾದರೆ ಒಂದೊಂದು ಕ್ಷೇತ್ರಕ್ಕೆ ಒಂದೊಂದು ದೃಷ್ಟಿಕೋನ ಇರುತ್ತದೆ. ಆದರೆ, ಬೆಳಗಾವಿಯಲ್ಲಿ ಕಾಂಗ್ರೆಸ್ ಗೆಲುವಿಗೆ ಮೊದಲಿನಿಂದಲೂ ಉತ್ತಮ ವಾತಾವರಣ ಇತ್ತು. ಜನಬೆಂಬಲ ಕೂಡ ವ್ಯಕ್ತವಾಗಿತ್ತು. ಈ ನಡುವೆಯೂ ಫಲಿತಾಂಶ ನಮಗೆ ಕೈ ಕೊಟ್ಟಿತು ಎಂದು ಹೇಳಿದರು. ಕಾಂಗ್ರೆಸ್ ಸೋಲಿನ ಬಗ್ಗೆ ಹೈಕಮಾಂಡ್ ಪರಾಮರ್ಶೆ ಸಮಿತಿ ರಚಿಸಿರುವ ವರದಿ ಬಗ್ಗೆ ನನಗೆ ಗೊತ್ತಿಲ್ಲ ಎಂದು ಈ ವೇಳೆ ಸಚಿವರು ಸ್ಪಷ್ಟಪಡಿಸಿದರು. ಕಾಂಗ್ರೆಸ್ ಪಕ್ಷ ಕರ್ನಾಟಕದಲ್ಲಿ ಹೆಚ್ಚು ಸ್ಥಾನ ಗೆಲ್ಲದಿರಬಹುದು. ಆದರೆ, ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ. ಜನರ ಸಬಲೀಕರಣಕ್ಕಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಸ್ವಾರ್ಥ ಬಿಟ್ಟು ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ನೀಡುತ್ತಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದರು.

ಸಚಿವ ಸತೀಶ್ ಜಾರಕಿಹೊಳಿ ಹಾಗೂ ಅಥಣಿ ಶಾಸಕ ಲಕ್ಷ್ಮಣ್ ಸವದಿ ನಡುವಿನ ವಾಕ್ಸಮರಕ್ಕೆ ಪ್ರತಿಕ್ರಿಯಿಸಿದ ಸಚಿವರು, ತಾವು ಯಾರೊಬ್ಬರ ಪರವಾಗಿ ಇಲ್ಲ, ಇಬ್ಬರ ಪರವಾಗಿಯೂ ಇದ್ದೇನೆ. ಇಬ್ಬರೂ ದೊಡ್ಡ ನಾಯಕರು, ಒಟ್ಟಿಗೆ ಕುಳಿತು ಮಾತಾಡಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಸೂಕ್ತ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

# ಕಲಿಗಳ ಕರುನಾಡಿದು



ಸೊಬಗಿನ ಸುಂದರ ಚೆಲುವಿನ ಐಸಿರಿಯ ಜೇನಿನ ಗೂಡಿದು. ಕೃಷ್ಣೆ-ತುಂಗೆ-ಕಾವೇರಿಯ ಪವಿತ್ರ ನದಿಗಳ ಪಾವನ ಮಣ್ಣಿದು. ರಾಜ ಮಹಾರಾಜರು ಆಳಿದ ನಾಡಿದು.ಪ್ರಾಣಾರ್ಪಣೆಗೈದ ವೀರರತ್ನಗಳು, ಜ್ಞಾನಪೀಠ ರತ್ನಗಳು ಸಾಹಿತಿ-ಕಲಾವಿದರು,ಚಿಂತಕರು ಹೀಗೆ ನೂರೆಂಟು ಜನರಿಂದೊಡಗೂಡಿದ ಸಪ್ತಕೋಟಿ ಜನರ ಸ್ವರ್ಗವಿದು ಕರ್ನಾಟಕ. ಇಂಥ ಸ್ವರ್ಗಭೂಮಿಯಲ್ಲಿ ರಾಷ್ಟ್ರಕವಿ ಕುವೆಂಪು ಜನಿಸಿದಕುಪ್ಪಳ್ಳಿಯಲ್ಲಿ ಗುರುವಂದನಾ ಕಾರ್ಯಕ್ರಮ ಅಮ್ಮ ಹೆಸರಿನಲ್ಲಿ ಪುಸ್ತಕ ಬಿಡುಗಡೆ ಕವಿಗೋಷ್ಠಿ ಸಾಧಕರಿಗೆ ಸನ್ಮಾನ ಗಾಯನವನ್ನು ಏರ್ಪಡಿಸಿ ಕಾವ್ಯ ಪ್ರವಾಸವನ್ನು ಜುಲೈ 27. 28 ಆಯೋಜಿಸಲಾಗಿದೆ. ನಿಮ್ಮ ಮಸ್ತಕದಿಂದ ಪ್ರತಿದಿನ ಅರಳುವ ಕಾವ್ಯ ಕುಸುಮಗಳಿಗೆ ಒಂದು ಅತ್ಯಾಕರ್ಷಕವಾದ ಶೀರ್ಷಿಕೆ ಕೊಟ್ಟು ರಚಿಸಿರುವ ನಿಮ್ಮ ಕಾವ್ಯ ಮಾಲೆಗಳು ರಾಷ್ಟ್ರಕವಿ ಕುವೆಂಪು ಕುಪ್ಪಳ್ಳಿ ಹೆಬ್ಬಾಗಿಲಿಗೆ ಅತ್ಯಾಕರ್ಷಕವಾದ ತೋರಣವಾಗಲಿ. ಕವನ ಸಂಕಲನಕ್ಕೆ ಅಮ್ಮ ಶೀರ್ಷಿಕೆಯಕವಿತೆ ಒಂದನ್ನು ರಚಿಸಿ ಕಳುಹಿಸಿಕೊಡಿ.

ನೂರೊಂದು ಕವಿಗಳ ಕವಿತೆಗಳನ್ನು ಪ್ರಕಟಿಸಲಾಗುವುದು. ಕವಿತೆಗಳನ್ನು ಕಳುಹಿಸಿರುವ ಕವಿಗಳಿಗೆ ಕಾರ್ಯಕ್ರಮದಲ್ಲಿ ಪುಸ್ತಕ ಸನ್ಮಾನ ನೀಡಲಾಗುವುದು. ಕವಿತೆ ಕಳುಹಿಸಲು ಕೊನೆಯ ದಿನಾಂಕ ಜೂನ್ 20-7-24 ಕಾವ್ಯ ಪ್ರವಾಸದಲ್ಲಿ ಎಲ್ಲಾ ಕರುನಾಡಿನ ಕವಿಗಳಿಗೂ ಸಾಹಿತ್ಯಾಸಕ್ತರಿಗೂ ಕನ್ನಡ ಅಭಿಮಾನಿಗಳಿಗೂ ಸನ್ಮಿತ್ರರಿಗೂ ಬಂಧು-ಬಳಗದವರಿಗೂ ಕಾರ್ಯಕ್ರಮಕ್ಕೆ ಆತ್ಮೀಯ ಸ್ವಾಗತ ಸುಸ್ವಾಗತ . ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ

95909 39909
ನಾಗೇಶ್ ಬಿ
ಅಧ್ಯಕ್ಷರು ಜಾಗೃತಿ ಟ್ರಸ್ಟ್

# ಶಿವಪ್ಪ ಬಸಪ್ಪ ಬಂಚೋಡಿ ನೂತನ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆ



ವಿಜಯಪುರ:ಬಸವನ ಬಾಗೇವಾಡಿ ತಾಲೂಕ ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಿ ಸಂಘ ನಿಯಮಿತ ಬಸವನಬಾಗೇವಾಡಿಯ ನೂತನ ನಿರ್ದೇಶಕರಾಗಿ ಶ್ರೀ ಶಿವಪ್ಪ ಬಸಪ್ಪ ಬಂಚೋಡಿಯವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

Printed by: SUCHITHRA PRINTER's & PUBLISHER's,#378/379, MAYAGAPPA COMPLEX'' 1st Stage 6th phase Industrial Town West of Chord Road Rajajinagar Bengaluru 560044,karnataka.
Publised by: S.K.Wadeyar,#378/379, "MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru-560044,karnataka.
Owned by: S.K.Wadeyar,#378/379, "MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru-560044,karnataka.
Printed At :SUCHITHRA PRINTER's & PUBLISHER's,#378/379, MAYAGAPPA COMPLEX'' 1st Stage 6th phase Industrial Town West of Chord Road Rajajinagar Bengaluru 560044,karnataka.
Editor :S.K.Wadeyar,#378/379, "MAYAGAPPA COMPLEX" 1st Stage 6th phase Industrial Town West of Chord Road Rajajinagar Bengaluru-560044,karnataka.